ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2017

॥ ಧಿಯೋ ಯೋನಃ ಪ್ರಚೋದಯಾತ್ ॥


ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ–17 ಸಂಚಿಕೆ–1 ಪುಟಗಳು–10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಮಂಗಳೂರಿನಲ್ಲಿ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016







ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016 ತಾ.17–12–2016 ಹಾಗೂ ತಾ.18–12–2016 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಜರಗಿತು. ಶೃಂಗೇರಿ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಹಾಗೂ ತತ್ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರ ಪರಮಾನುಗ್ರಹದಿಂದ ಅವರ ಪೂರ್ಣಾಶ್ರೀರ್ವಾದಗಳೊಡನೆ ಸಮಾಜದ ಸಂಘಟನೆಯ, ಸಾಧನೆಗೈದ ವರನ್ನು ಪುರಸ್ಕರಿಸುವ, ಸಾಧನೆಗೈಯುತ್ತಿರು ವವರನ್ನು ಪ್ರೋತ್ಸಾಹಿಸುವ ಹಾಗೂ ಸಮಾಜದ ಜ್ವಲಂತ ಸಮಸ್ಯೆಗಳ ಬಗ್ಗೆ ಚಿಂತನ–ಮಂಥನ–ಮಾರ್ಗದರ್ಶನ ಇತ್ಯಾದಿ ಉದ್ದೇಶಗಳೊಂದಿಗೆ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳು ನೆರವೇರಿ, ಸುಮಾರು 2000ಕ್ಕೂ ಹೆಚ್ಚು ಸಮಾಜಬಾಂಧವರ ಸಹಕಾರದೊಂದಿಗೆ ಸಮಾವೇಶವು ಸಂಪೂರ್ಣ ಯಶಸ್ವಿಯಾಯಿತು

ತಾ.17–12–2016ನೇ ಶನಿವಾರ ಬೆಳಿಗ್ಗೆ 6 ಗಂಟೆಗೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಸಮಾಜದ ಅನೇಕ ಋತ್ವಿಜ ರೊಂದಿಗೆ ಚಂಡಿಕಾಹೋಮವು ಆರಂಭ ವಾಯಿತು. ನೂರಾರು ಸಮಾಜ ಬಾಂಧವರು ಕರ್ತೃಗಳಾಗಿ ಭಾಗವಹಿಸಿ ಪೂರ್ಣಾಹುತಿ ಯನ್ನು ಸಮರ್ಪಿಸಿದರು. ಪೂರ್ವಾಹ್ನ 11 ಗಂಟೆಗೆ ಸಭಾ ಕಾರ್ಯಕ್ರಮವು ಆರಂಭ ವಾಯಿತು. ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹಾಗೂ ಕೊಲ್ಕೊತ್ತಾದ ರಾಷ್ಟ್ರೀಯ ಕಾನೂನು ವಿದ್ಯಾಲಯದ ಮಾಜಿ ಉಪಕುಲಪತಿಗಳಾದ ಶ್ರೀ ಟಿ.ಕೆ.ಸುಬ್ರಹ್ಮಣ್ಯ ಇವರು ಕಾರ್ಯ ಕ್ರಮವನ್ನು ದೀಪಬೆಳಗಿಸಿ ಉದ್ಘಾಟಿಸಿ ದಿಕ್ಸೂಚಿ ಭಾಷಣವನ್ನು ಮಾಡಿದರು. ಶ್ರೀ ಎಂ.ಆರ್. ವಾಸುದೇವ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ನಂತರ ಹಿರಿಯ ನಾಗರಿಕರ ಸಮ್ಮೇಳನ ಹಾಗೂ ಹಿರಿಯ ನಾಗರಿಕರಿಗೆ ದೊರಕುವ ಸವಲತ್ತುಗಳ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮವು ನೆರವೇರಿತು. ಡಾ.ಸಂತೋಷಕುಮಾರ ಶಾಸ್ತ್ರಿ ಇವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ದರು. ಶ್ರೀ ಎಂ.ಆರ್. ವಾಸುದೇವ ಇವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಧ್ಯಾಹ್ನದ ಭೋಜನಾನಂತರ ಶ್ರೀ ಪಿ. ಸಂಜಯ್ ಕುಮಾರ್ ರಾವ್ ಇವರ ಅಧ್ಯಕ್ಷತೆಯಲ್ಲಿ ನಮ್ಮ ಸಮಾಜದ 90 ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿದ ಹಿರಿಯ ನಾಗರಿಕರಿಗೆ ಗೌರವಾರ್ಪಣೆ ಕಾರ್ಯಕ್ರಮವು ನೆರವೇರಿತು. ಸಂಜೆ ನಾಲ್ಕರ ನಂತರ ನಮ್ಮ ಸಮಾಜದ ವಿವಿಧ ಸಂಘಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು

(5ನೇ ಪುಟಕ್ಕೆ...)

## ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕೋತ್ಸವ ಸಮಾರಂಭವು ದಿನಾಂಕ 25–12–2016ರಂದು ಆದಿತ್ಯವಾರ ಬೈಂದೂರು ನಾಯ್ಕನಕಟ್ಟೆಯ ಕೆರ್ಗಾಲು ಮಹಾಗಣಪತಿ ದೇವಾಲಯದ ಸಭಾಂಗಣದಲ್ಲಿ ಜಂಬೆ ಅಚ್ಯುತ ಹೆಬ್ಬಾರ್ ವೇದಿಕೆಯಲ್ಲಿ ಜಂಬೆ ಕೃಷ್ಣಗೋಪಾಲ ಮತ್ತು ಸಹೋದರರ ಪ್ರಾಯೋಜಕತ್ವದಲ್ಲಿ ಜರಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಕೃಷ್ಣಗೋಪಾಲ ಹೆಬ್ಬಾರ್ ಜಂಬೆ ನೆರವೇರಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಸಮಾಜ ಬಾಂಧವರಿಗೆ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಭಾ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯ ಸಾಧಕರಾದ ಶ್ರೀ ಮಂಜುನಾಥ ಹೆಬ್ಬಾರ್ ತೆಂಕಬೈಲು, ವೆಂಕಪ್ಪಯ್ಯ ಹೆಬ್ಬಾರ್ ಬಲ್ಘೋಣ್, ಶ್ರೀಮತಿ ನಿರ್ಮಲಾದೇವಿ ಬೈಂದೂರು, ಕೃಷ್ಣಮೂರ್ತಿ ಹೆಬ್ಬಾರ್ ತೆಂಕಬೈಲು ಇವರನ್ನು ಸನ್ಮಾನಿಸಲಾಯಿತು. ಶೈಕ್ಷಣಿಕ ಕ್ಷೇತ್ರದ ಸಾಧನೆಗಾಗಿ ಕು. ಶ್ರೀಲಕ್ಷ್ಮೀ ಹೆಬ್ಬಾರ್ ಮತ್ತು ಕುಮಾರಿ ಶ್ರದ್ಧಾ ಇವರನ್ನು ವಿಶೇಷವಾಗಿ ಗೌರವಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಶ್ರೀ ಉಮೇಶ್ ಶ್ಯಾನುಭಾಗ್ ಮೂಕಾಂಬಿಕಾ ಟಿಂಬರ್ಸ್‌ರವರು ಗೌರವಿಸಿದರು. ವಿದ್ಯಾರ್ಥಿವೇತನವನ್ನು ಶ್ರೀ ಉದಯ ಹೆಬ್ಬಾರ್, ಮೇನೆಜಿಂಗ್ ಡೈರೆಕ್ಟರ್ ಗ್ರಾಮೀಣಕೂಟ ಫೈನಾನ್ಸಿಯಲ್ ಬೆಂಗಳೂರು ಇವರು ವಿತರಿಸಿದರು. ತಾಲೂಕು ಸ್ಥಾನಿಕ ಬ್ರಾಹ್ಮಣರ ವಿಳಾಸ ಮತ್ತು ದೂರವಾಣಿ ಸಂಖ್ಯೆಯ ಕೈಪಿಡಿಯನ್ನು ಉಡುಪಿಯ ಕೆನರಾ ಹೆಲ್ತ್ ಸೆಂಟರ್‌ನ ಡಾ। ಸುದರ್ಶನ ರಾವ್‌ರವರು ಬಿಡುಗಡೆಗೊಳಿಸಿದರು. ಆಟೋಟ ಸ್ಪರ್ಧೆಗಳಲ್ಲಿ ವಿಜೇತರಿಗೆ ಶ್ರೀ ಸುರೇಶ್ ಹೆಬ್ಬಾರ್ ಕ್ಲಸ್ಟರ್ ಹೆಡ್. ಆ್ಯಕ್ಸಿಸ್ ಬ್ಯಾಂಕ್ ಇವರು ವಿತರಿಸಿದರು. ಕಾರ್ಯಕ್ರಮದಲ್ಲಿ ಸಂಘದ ಸ್ಥಾಪಕಾಧ್ಯಕ್ಷ ಶ್ರೀ ಹಿರಿಯಣ್ಣ ರಾವ್ ಹೊಸ್ಕೋಟೆ, ಗೌರವಾಧ್ಯಕ್ಷ ಶ್ರೀ ಗಣೇಶ್ ರಾವ್ ಕುಂಭಾಶಿ, ಪ್ರೊ.ಶಂಕರ್ ರಾವ್ ಕಾಳಾವರ, ಶ್ರೀ ಶೇಷಪ್ಪಯ್ಯ ಬೈಂದೂರು ಅಲ್ಲದೆ ಹಲವಾರು ಸಮಾಜದ ಹಿರಿಯರು ಉಪಸ್ಥಿತರಿದ್ದರು. ಆಟೋಟ ಸ್ಪರ್ಧೆಯ ಬಹುಮಾನವನ್ನು ಚಂದ್ರಶೇಖರ ಹೆಬ್ಬಾರ್ ನರಸೀಪುರ ಹಾಗೂ ಸನ್ಮಾನದ ಪ್ರಾಯೋಜಕತ್ವವನ್ನು ಶ್ರೀ ಸುಬ್ರಾಯ ಹೆಗಡೆ ಇಳಲಿ ವಹಿಸಿಕೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಗೋಪಾಲಕೃಷ್ಣ ಹೆಬ್ಬಾರ್ ವಹಿಸಿದ್ದರು, ಕಾರ್ಯದರ್ಶಿ ಸತ್ಯನಾರಾಯಣ ಹೆಬ್ಬಾರ್ ಪ್ರಸ್ತಾವಿಸಿ, ಉಷಾ ಶ್ರೀಧರ್ ಹೆಬ್ಬಾರ್ ವಂದಿಸಿದರು. ಶ್ರೀ ದಯಾನಂದ ರಾವ್ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2017

**22-01-2017ನೇ ಆದಿತ್ಯವಾರದಂದು ನಡೆಯಲಿದೆ.**

ಆಸಕ್ತ ತಂಡಗಳು ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ವಸಂತ ರಾವ್ ಕರಂಬಳ್ಳಿ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 9-30ಕ್ಕೆ ಮುಂಚಿತವಾಗಿ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ, ಅಲೆವೂರು ಶ್ಯಾಮರಾವ್ ಹಾಗೂ ಎಲ್ಲೂರು ಸಜೆ ದಿ। ಸರ್ವೋತ್ತಮ ರಾವ್ ಹಾಗೂ ಕಾಶಿಯಮ್ಮರವರ ಸ್ಮರಣಾರ್ಥ ಅವರ ಪುತ್ರ, ಸಜೆ ಜನಾರ್ದನ ರಾವ್‌ರವರು ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ** ನಡೆಯಲಿದೆ. ಆಸಕ್ತ ತಂಡಗಳು **ಬೆಳಿಗ್ಗೆ 9-30ಕ್ಕೆ** ಹಾಜರಿರಬೇಕಾಗಿ ಅಪೇಕ್ಷೆ. ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

ಅದೇ ದಿನ ಬೆಳಿಗ್ಗೆ ಗಂಟೆ 9-00ರಿಂದ
ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.
(ವಿವರಗಳು 3ನೇ ಪುಟದಲ್ಲಿ)

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

**(ಅಂತರ್ಜಾತೀಯ ವಿವಾಹದ ಬಗ್ಗೆ ಚರ್ಚೆಯ ಮುಂದುವರಿದ ಭಾಗ)**

ಅಂತರ್ಜಾತೀಯ ವಿವಾಹಗಳ ಬಗೆಗಿನ ಚರ್ಚೆಯಲ್ಲಿ ಜಾತ್ಯಾತೀತರಾಗಿರುವಾಗಲೂ "ಜಾತಿ" ಏಕೆ ಬೇಕು ಎಂಬುದರ ಬಗ್ಗೆ ಕಳೆದ ಸಂಚಿಕೆಯಲ್ಲಿ ವಿವರಿಸಿದ್ದೆ. ಜಾತಿಯೆಂಬುದು ಅಂತಸ್ತಿನ ಬೇಧವಿಲ್ಲದೆ ಸಮಾನ ಸಂಸ್ಕೃತಿಯವರು ಒಂದಾಗಿ ಬಾಳುವ ಕೂಟವೆಂದು ಭಾವಿಸುವುದಾದರೆ ಅಂತರ್ಜಾತೀಯ ವಿವಾಹಗಳಿಂದ ನಮಗೆ ಯಾವ ರೀತಿ ಹಾನಿಯಾದೀತೆಂಬುದನ್ನು ಚರ್ಚಿಸೋಣ. ಸುತ್ತು ಬಳಸಿ ಚರ್ಚಿಸುತ್ತಾ ಬಂದು ಮೂಲ ವಿಷಯವು ಪ್ರಸ್ತಾಪವಾಗುತ್ತಿದ್ದಂತೆ ವಿಷಯವು ಹೆಚ್ಚೆಚ್ಚು ಮುಜುಗುರವನ್ನುಂಟು ಮಾಡುವಂತಾದ್ದೂ ಹಾಗೂ ಸಂದಿಗ್ಧತನದ್ದೂ ಆಗುತ್ತಿರುವುದರಿಂದ ಬರಹದಲ್ಲಿ ಚಾಣಾಕ್ಷತನದ ಅಗತ್ಯವನ್ನು ನಾನೀಗ ಮನಗಾಣುತ್ತಿದ್ದೇನೆ. ಆದುದರಿಂದ ಸಮಾಜಬಾಂಧವರು ಅಭಿಪ್ರಾಯಬೇಧವಿದ್ದಲ್ಲಿ ಕ್ಷಮಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಒಟ್ಟಾರೆ ನಮ್ಮ ಸಮಾಜದ ಒಳಿತಿಗೆ ಹಾಗೂ ಸಮಾಜಬಾಂಧವರಿಗೆ ನಿರ್ಣಯವನ್ನು ತೆಗೆದುಕೊಳ್ಳಲು ಸಹಕಾರಿಯಾಗಬಹುದಾದ್ದರಿಂದ ನೇರ ಮಾತಿನಲ್ಲಿ ನನ್ನ ಅಭಿಪ್ರಾಯವನ್ನು ಇಲ್ಲಿ ನಿಮ್ಮ ಮುಂದಿಡುತ್ತಿದ್ದೇನೆ.

ಮೊದಲನೆಯದಾಗಿ ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗಿರುವ ಮಹತ್ವ. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲವಿದ್ದರೆ ತಪ್ಪುಗಳು "ಸಾಧು" ವಾಗುತ್ತವೆ ಹಾಗೂ ಸರಿಯಾದದ್ದು ಸಂಖ್ಯಾಬಲವಿಲ್ಲದಿದ್ದರೆ "ಅಸಾಧು"ವಾಗುತ್ತದೆ. ಈಗ ಮನೆಗೊಂದೇ ಮಗು. ಹಾಗಿರುವಾಗ ಆ ಮಗುವೂ ಜಾತಿಯ ಹೊರಗೆ ಮದುವೆಯಾಗಿ "ಹೊರ" ಬಿದ್ದರೆ ಸಂಘಟನೆಯ ಸಂಖ್ಯಾಶಕ್ತಿ ಕುಗ್ಗುವುದು ಖಂಡಿತ. ಈ ಕಾಲದ ಯುವಕ ಯುವತಿಯರು ಕೇವಲ ಸಂಖ್ಯೆ ಮಾತ್ರವಲ್ಲ, ಉತ್ತಮ ವಿದ್ಯಾಭ್ಯಾಸ ಹಾಗೂ ಮಾರ್ಗದರ್ಶನಗಳಿಂದ ಬೆಳೆದ ಪ್ರೌಢರು ಹಾಗೂ ಸಮಾಜಕ್ಕೆ ಆಸ್ತಿಯಾಗಬಲ್ಲರು ಎಂಬುದನ್ನು ಗಮನಿಸಬೇಕು.

ಎರಡನೆಯದಾಗಿ ಕರಾವಳಿಯಲ್ಲಿ ಅದ್ವೈತ ಮತಾನುಯಾಯಿಗಳೂ ಶ್ರೀ ಶೃಂಗೇರಿ ಮಠದ ಶಿಷ್ಯವರ್ಗದವರೂ ಆಗಿರುವ ನಾವು ಇತರ ಸಂಪೂರ್ಣ ವಿರುದ್ಧ ಧಾರ್ಮಿಕ ಕಲ್ಪನೆಯುಳ್ಳ ಮತಸ್ಥ ಬ್ರಾಹ್ಮಣರನ್ನು ವಿವಾಹವಾದಾಗ ಒಂದೇ ಮನೆಯಲ್ಲಿ ಇಬ್ಬಗೆಯ ಧಾರ್ಮಿಕ ನಂಬುಗೆಗಳು ದ್ವಂದ್ವವನ್ನುಂಟು ಮಾಡಲಿಕ್ಕಿಲ್ಲವೇ?. ಇದು ಮುಂದೆ ಶ್ರೀ ಶೃಂಗೇರಿ ಮಠದೊಂದಿಗಿನ ನಮ್ಮ ಸಂಬಂಧದಲ್ಲಿ ಪರಿಣಾಮ ಬೀರಲಿಕ್ಕಿಲ್ಲವೇ?

ನಮ್ಮಂತಹಾ ಸಣ್ಣ ಸಮಾಜದಲ್ಲಿ ಇಂತಹಾ ವಿವಾಹಗಳು ಮುಂದುವರಿದರೆ ನಮ್ಮ ಸಣ್ಣ ಸಮಾಜವು ಇತರ ದೊಡ್ಡ ಸಮಾಜದೊಂದಿಗೆ ವಿಲೀನವಾಗಿಬಿಡುತ್ತದೆ ಎಂಬುದೊಂದು ಸಾಧ್ಯತೆಯನ್ನು ಅನೇಕರು ಊಹಿಸುತ್ತಿದ್ದಾರೆ. ಇದು better than worse ಎಂಬ ಮಾತಿನಂತಿದೆ. ಆದರೆ ಇದು ಮುಂದೊಂದು ದಿನ ನಿಜವಾಗಬೇಕಾದರೂ ಕೂಡ ಎಲ್ಲಾ ಅಂತರ್ಜಾತೀಯ ವಿವಾಹಗಳು ಒಂದೇ ಸಮಾಜದೊಂದಿಗೆ ನಡೆದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಈಗ ಆಗುತ್ತಿರುವಂತೆ ಒಬ್ಬೊಬ್ಬರು ಒಂದೊಂದು ಮತ/ಧರ್ಮದವರನ್ನು ವಿವಾಹವಾಗುವುದರಿಂದ ಇದು ಸಾಧ್ಯವಿಲ್ಲ. ಈಗಿನ ಪರಿಸ್ಥಿತಿಯಂತೆಯೇ ಅಂತರ್ಜಾತೀಯ ವಿವಾಹಗಳು (ಒಬ್ಬೊಬ್ಬರು ಒಂದೊಂದು ಮತ ಧರ್ಮದವರನ್ನು ವಿವಾಹವಾಗುವುದು) ಮುಂದುವರೆದರೆ ಸ್ಥಾನಿಕ ಸಮಾಜ ತನ್ನ ಧಾರ್ಮಿಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆಯೇ ವಿನಃ ಇನ್ನೊಂದು ಮತದೊಂದಿಗೆ ವಿಲೀನವಾಗುವುದಿಲ್ಲ.

ಬ್ರಾಹ್ಮಣರು ಸಸ್ಯಾಹಾರಿಗಳು. ಇವರಿಗೆ ಮದ್ಯಪಾನ ಇತ್ಯಾದಿ ವ್ಯಸನಗಳು ಸರ್ವಥಾ ನಿಷಿದ್ಧ. ಹಾಗೆಯೇ ಬ್ರಾಹ್ಮಣರದ್ದು ಮೆದು ಮಾತು, ಸಾತ್ವಿಕ ನಡವಳಿಕೆ. ಬ್ರಾಹ್ಮಣರಲ್ಲಿ ಇದಕ್ಕೆ ವಿರುದ್ಧವಾದ ಅಭ್ಯಾಸಗಳಿಲ್ಲದವರಿಲ್ಲವೆಂದಲ್ಲ. ಆದರೆ ನಮ್ಮಲ್ಲಿ ಅವು ತಪ್ಪು ಎಂಬ ಭಾವನೆ ಬಲವಾಗಿದೆ. ಇತರರನ್ನು ಮದುವೆಯಾಗುವಾಗ ಈ ಆಹಾರ ಪದ್ಧತಿಯ ಹಾಗೂ ಹವ್ಯಾಸ ಮತ್ತು ನಡವಳಿಕೆಗಳ ವೈರುಧ್ಯ ಬಲವಾಗಿ ಕಾಡುತ್ತದೆ. ಅಷ್ಟು ಮಾತ್ರವಲ್ಲ ತಾನಾಗಲಿ ಅಥವಾ ತನ್ನ ಮಕ್ಕಳಾಗಲಿ ಮುಂದೊಂದು ದಿನ ಈ ಹವ್ಯಾಸಗಳನ್ನು, ನಡವಳಿಕೆಗಳನ್ನು ಸಹವಾಸದೋಷದಿಂದ ಗಳಿಸಿಕೊಳ್ಳುವ ಸಾಧ್ಯತೆ ಇದೆ. ನಿಧಾನವಾಗಿ ಈ ಹವ್ಯಾಸಗಳು ಮುಂದೆ ಸಾರ್ವತ್ರಿಕವಾಗಬಹುದು. ಸಂಸ್ಕೃತಿಯೂ ಆಗಬಹುದು.

ಹೀಗೆ ಜೊತೆಗಾರ/ರ್ತಿಯಲ್ಲಿರುವ ಆಚಾರ ವಿಚಾರ ನಂಬಿಕೆ ಹಾಗೂ ಹವ್ಯಾಸಗಳಲ್ಲಿರುವ ಬೇಧಗಳಿಂದಾಗಿ ಅವರನ್ನು ಮದುವೆಯಾದ ನಮ್ಮ ಮಕ್ಕಳು ನಮ್ಮ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳಲು ಹಿಂಜರಿಯಬಹುದು. ಒಂಟಿತನವನ್ನು ಅನುಭವಿಸಬೇಕಾಗಬಹುದು. ಈ ಬೇಧಗಳಿಂದ ಅವರ ಸಂಸಾರದಲ್ಲಿ ಒಡಕು ಕಾಣಿಸಿಕೊಳ್ಳುವ ಸಾಧ್ಯತೆ ಇದ್ದೀತೆ?

ಇಂದಿನ ಮಕ್ಕಳೇ ಮುಂದಿನ ಜನಾಂಗ. ಅದು ಸರ್ವಜನಾಂಗದ ತೋಟದಂತಾದರೆ "ಸ್ಥಾನಿಕ" ಎಂಬ ಹೆಸರನ್ನು ಹೊತ್ತಿರುವ ಈ ಎಲ್ಲಾ ಸಂಘಟನೆಗಳನ್ನು ಮುಂದುವರಿಸಿಕೊಂಡು ಹೋಗುವವರಾರು? ಅದಕ್ಕೆ ಕಾರ್ಯಕರ್ತರು ಯಾರು? ಅದರ ವ್ಯವಹಾರಗಳು ಯಾರ ವಶಕ್ಕೆ?

ಕರಾವಳಿಯ ಜನರಲ್ಲಿ ವಲಸೆ ಬಂದವರು ಹಾಗೂ ಮೂಲನಿವಾಸಿಗಳು ಎಂಬ ಎರಡು ಪ್ರಭೇದಗಳಿವೆ. ವಂಶವಾಹಿಗಳ ಮೂಲಕ ಹರಿದು ಬರುವಂತಹಾ ದೈಹಿಕ ಹಾಗೂ ಮಾನಸಿಕ ಭಿನ್ನತೆಗಳು ಈ ಎರಡು ಪ್ರಭೇಧಗಳಿಗಿವೆ. ಈ ಭಿನ್ನತೆಗಳಿಂದಾಗಿ ಅವರಲ್ಲಿ ಸಾಮಾಜಿಕ ಭಿನ್ನತೆಯೂ ಇದೆ. ಜಾತಿಪದ್ಧತಿಗೆ ಕೊಡುತ್ತಿದ್ದ ಮಹತ್ವದಿಂದಾಗಿ ಇನ್ನೂ ಈ ಪ್ರಭೇದಗಳು ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡಿವೆ. ಸ್ಥಾನಿಕ ಬ್ರಾಹ್ಮಣರು ಈ ಸ್ಥಳಕ್ಕೆ ವಲಸೆ ಬಂದು ಸುಮಾರು ಒಂದು ಸಾವಿರ ವರ್ಷಗಳೇ ಆಗಿದ್ದರೂ ಇಲ್ಲಿಯ ಮೂಲನಿವಾಸಿಗಳೊಂದಿಗೆ ವಿಲೀನವಾದದ್ದು ಸ್ವಲ್ಪಾಂಶ ಮಾತ್ರ (ಇತರ ವಲಸೆ ಬಂದವರೊಡನೆ ತುಲನೆ ಮಾಡುವಾಗಲೂ ಕೂಡಾ). ಈಗ ದೊಡ್ಡ ಸಂಖ್ಯೆಯಲ್ಲಿ ವಿಲೀನವಾಗುವುದಾದರೆ ಅದು ಬೀರಲಿರುವ ದೈಹಿಕ ಹಾಗೂ ಸಾಮಾಜಿಕ ಪರಿಣಾಮಗಳನ್ನು ಅನುಭವಿಸಿಯೇ ಹೇಳಬಹುದಷ್ಟೇ.

(ಮುಂದುವರಿಯುವುದು)

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

–ಸಂಪಾದಕ ಮಂಡಳಿ


**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-17**

–ವೈ. ಮೋಹನ ರಾವ್

## ಕುತ್ಯಾಳ ಗೋಪಾಲಕೃಷ್ಣ ದೇವಸ್ಥಾನ, ಕೂಡ್ಲು, ಕಾಸರಗೋಡು



ಚಿತ್ರ : ಬಿ.ಜಯರಾಮ ರಾವ್



ಕೂಡ್ಲಿನ ಖ್ಯಾತಿಗೆ ಕಳಸಪ್ರಾಯವಾಗಿರುವ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯವು ಕಾಸರಗೋಡಿನ ಪ್ರಸಿದ್ಧ ದೇವಾಲಯವಾಗಿದೆ. ಗೋಪಾಲಕೃಷ್ಣ ಹಾಗೂ ಅನ್ನಪೂರ್ಣೇಶ್ವರಿ ಇಲ್ಲಿಯ ಆರಾಧ್ಯ ದೇವರು. ಮುಖ್ಯ ಗರ್ಭಗುಡಿಯಲ್ಲಿ ಗೋಪಾಲಕೃಷ್ಣನ ಚಿತ್ತಾಕರ್ಷಕ ವಿಗ್ರಹವಿದೆ. ಎದುರಿನ ನಮಸ್ಕಾರ ಮಂಟಪದ ಎಡಭಾಗದಲ್ಲಿ ಅನ್ನಪೂರ್ಣೇಶ್ವರಿಯ ಗರ್ಭಗುಡಿಯಿದೆ. ಗೋಪಾಲಕೃಷ್ಣನ ಕರಗಳಲ್ಲಿ ಶಂಖ, ಚಕ್ರ ಮತ್ತು ಚಿಕ್ಕ ಮಗುವೂ, ಅನ್ನಪೂಣೇಶ್ವರಿಯ ಕರಗಳಲ್ಲಿ ಅನ್ನದ ಸೌಟು ಇರುವುದು ಗಮನಾರ್ಹ.

ಕುತ್ಯಾಳ ಗೋಪಾಲಕೃಷ್ಣ ದೇವರು ಇಲ್ಲಿನ ಹಾಗೂ ಸುತ್ತಮುತ್ತಲಿನ ಗ್ರಾಮದಲ್ಲೆಲ್ಲ 'ಸಂತಾನ ಗೋಪಾಲಕೃಷ್ಣ' ಎಂದೇ ಪ್ರಸಿದ್ಧ. ಕೂಡ್ಲು ಮನೆತನದ ಹಿರಿಯರೊಬ್ಬರು ಸಂತಾನವಿರದ ಕಾಲದಲ್ಲಿ ಮನೆಯಲ್ಲಿ ಪೂಜಿಸುತ್ತಿದ್ದ ಆ ದೇವರನ್ನು ಪ್ರಾರ್ಥಿಸಿ ಸಂತಾನಭಾಗ್ಯವಾದ ಬಳಿಕ ಈ ದೇವಾಲಯವನ್ನು ನಿರ್ಮಿಸಿ ದೇವರನ್ನು ಪ್ರತಿಷ್ಠಾಪಿಸಿದರೆಂಬ ಹಿನ್ನೆಲೆ ಇದೆ. ಇದರ ನೆನಪಿಗಾಗಿ ಇಲ್ಲಿನ ಉತ್ಸವದ ನಡುದೀಪದಂದು ದೇವರನ್ನು ಕೋಶಯಾತ್ರೆಯಲ್ಲಿ ತಂದು ಮನೆಯ ಮೂಡುಮಂಟಪ (ಪಡಿಪ್ಪೂರೆ) ದಲ್ಲಿ ಕುಳ್ಳಿರಿಸಿ ಕೂರಿಸಲಾಗುತ್ತದೆ.

1942ರಲ್ಲಿ ಅತೀ ವಿಜೃಂಭಣೆಯಿಂದ ಗೋಪಾಲಕೃಷ್ಣನ ಧ್ವಜಪ್ರತಿಷ್ಠಾ ಬ್ರಹ್ಮಕಲಶೋತ್ಸವವು ಜರಗಿದ ದಾಖಲೆಗಳಿವೆ ಹಾಗೂ ಆ ವರ್ಷದಲ್ಲಿ ದೇವಸ್ಥಾನಕ್ಕೆ ಧ್ವಜಸ್ತಂಭವನ್ನು ಪ್ರತಿಷ್ಠೆ ಮಾಡಿರುವುದಾಗಿ ತಿಳಿದು ಬರುತ್ತದೆ.

ಕಾಸರಗೋಡಿನ ಶಿವಮಂಗಲದ ಸಮೀಪದಲ್ಲಿ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯವಿದೆ. ಇದಕ್ಕೆ ಸುಮಾರು 500 ವರ್ಷಗಳ ಇತಿಹಾಸವಿದೆ. ಪ್ರಾಂಗಣದೊಳಗೆ ಉತ್ತರಾಭಿಮುಖವಾಗಿ ಅನ್ನಪೂರ್ಣೇಶ್ವರಿಯ ಗುಡಿಯಿದೆ. ವನಶಾಸ್ತ ನಿಗೂ ಇಲ್ಲಿ ಆರಾಧನೆಯಿದ್ದು ಇದು ಅತೀ ಪುರಾತನ ಕಾಲದ್ದೆಂದು ಹೇಳಲ್ಪಡುತ್ತದೆ. ಗೋಪಾಲಕೃಷ್ಣ ದೇವಾಲಯದ ಮುಂಭಾಗದಲ್ಲಿ 6 ಅಡಿ ಉದ್ದ, 4 ಅಡಿ ಅಗಲದ ಹಿರಿಯ ಬಲಿ ಕಲ್ಲೊಂದನ್ನು ಸ್ಥಾಪಿಸಲಾಗಿದೆ. ಮಂಟಮೆ ತ್ರಿಮೂರ್ತಿ ಕ್ಷೇತ್ರದಲ್ಲಿ ಅನಾಥವಾಗಿ ಬಿದ್ದಿದ್ದ ಈ ಕಲ್ಲಿನಲ್ಲಿ ವೀರಾಧಿವೀರರ ಚಿತ್ರಗಳಿದ್ದು ದೊಡ್ಡ ಸುಬ್ಬಯ್ಯ ಶ್ಯಾನುಭಾಗರ ಅಪೇಕ್ಷೆಯಂತೆ ಪುಳ್ಕೂರು ಬಾಚನು ಇದನ್ನು ತಂದಿದ್ದನಂತೆ.

ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಈ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಮುದ್ದು ಕೃಷ್ಣನ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಗೀತಾ ಕಂಠಪಾಠ ಸ್ಪರ್ಧೆ ಇತ್ಯಾದಿಗಳನ್ನು ಅಂದು ನಡೆಸಲಾಗುತ್ತದೆ. ಶ್ರೀಕೃಷ್ಣನು ಹುಟ್ಟಿದ ನಡುರಾತ್ರಿಯ ಶುಭ ಮಹೂರ್ತದಲ್ಲಿ ಶ್ರೀಕೃಷ್ಣನನ್ನು ತೊಟ್ಟಿಲಿಗೆ ಹಾಕಿ ಪೂಜಿಸುವ ಕ್ರಮವಿದೆ. ದೀಪಾವಳಿಯಂದು ಕಾನತ್‌ಕೆರೆ ದೈವಸ್ಥಾನದಲ್ಲಿ ತಂಬಿಲದೊಂದಿಗೆ ಗೋಪಾಲಕೃಷ್ಣ ದೇವಸ್ಥಾನದಲ್ಲಿ ರಾತ್ರಿಯ ಒಂದು ದಿನದ ಉತ್ಸವ ನೆರವೇರುತ್ತದೆ. ಇದೇ ರೀತಿ ಒಂದು ದಿನದ ಉತ್ಸವವು ಮಹಾನವಮಿಯಂದು, ವಿಷು ಸಂಕ್ರಮಣದಂದೂ ನಡೆಯುತ್ತದೆ. ದೇವರಿಗೆ ನೈವೇದ್ಯದೊಂದಿಗೆ ಬೆಲ್ಲ ಹಾಗೂ ಕಾಳುಮೆಣಸಿನ ಪಾನಕವನ್ನು ಸಮರ್ಪಿಸುವುದು ಇಲ್ಲಿಯ ವಿಶೇಷ. ಪ್ರತೀ ವರ್ಷ ಕುಂಭಮಾಸದ ಹುಣ್ಣಿಮೆಯಂದು ರಥೋತ್ಸವವು ಕೂಡಿಬರುವಂತೆ ಏಳು ದಿನದ ಉತ್ಸವ ಇಲ್ಲಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಬೆಳ್ಳಿಯ ಗರುಡನನ್ನು ಧ್ವಜಸ್ತಂಭಕ್ಕೆ ಏರಿಸುತ್ತಾರೆ.

ಈ ದೇವಸ್ಥಾನ ಕೂಡ್ಲು ಮನೆತನದ ಆಡಳಿತಕ್ಕೆ ಸೇರಿದೆ. ಪ್ರಸ್ತುತ ಶ್ರೀ ಕೆ.ಗೋಪಾಲಕೃಷ್ಣ ಶ್ಯಾನುಭಾಗರು ಕೂಡ್ಲು ದೇವಸ್ಥಾನದ ಅನುವಂಶಿಕ ಮೊಕ್ತೇಸರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಶುಭಕರ ಶ್ಯಾನುಭಾಗ್ ಮತ್ತು ಶ್ರೀಮತಿ ರಾಜೇಶ್ವರಿ ಶ್ಯಾನುಭಾಗ್ ಈ ಬಗ್ಗೆ ಮಾಹಿತಿಯನ್ನು ಹಾಗೂ ಚಿತ್ರಗಳನ್ನು ಬಿ.ಜಯರಾಮರಾವ್ ಒದಗಿಸಿದ್ದಾರೆ.

ಕೃಪೆ : ಕುತ್ಯಾಳ ಗೋಪಾಲಕೃಷ್ಣ ದೇವಸ್ಥಾನ ಮತ್ತು ಚಕ್ರತೀರ್ಥ ಕೃತಿಗಳು.

**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಮಕರ ಸಂಕ್ರಾತಿಯ ಶುಭಾಶಯಗಳು**

**Power Cut !!!???**
**Install Best Quality Inverters...**

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

**Inverters, UPS, Batteries, Repairs Maintenance & Charging**

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಶೆಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | |
|---|---|
| ವಾಹನ ಸಾಲ | 13% |
| ಹಳೆಯ ವಾಹನ | 15% |
| ಆಭರಣ ಸಾಲ | 13% |
| ವೈಯಕ್ತಿಕ ಸಾಲ | 16% |
| ಶಿಕ್ಷಣ ಸಾಲ | 13% |
| ಅಡಮಾನ ಸಾಲ | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | 5% | ನಿತ್ಯನಿಧಿ ಠೇವಣಿ | 5% |
| 46 ದಿನಗಳಿಂದ 181 ದಿನಗಳು | 6%, | 182 ದಿನಗಳಿಂದ 364 ದಿನಗಳು | 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | 9% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸ್ಶೆಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

# ಮಕರ ಸಂಕ್ರಾಂತಿ

–ಮ.ನಾ.ಹೆಬ್ಬಾರ

ಭೂಮಿಯಿಂದ ಮೇಲಿರುವ ಈ ಅವಕಾಶ (ಆಕಾಶ)ದಲ್ಲಿ ನೂರಾರು ಆಕಾಶಕಾಯಗಳಿವೆ; ಲಕ್ಷೋಪಲಕ್ಷ ನಕ್ಷತ್ರಗಳಿವೆ. ಮನೆಗೆ ಬೆಳಕು ಮತ್ತು ಶಾಖವನ್ನು ನೀಡುವ ಸೂರ್ಯಗೋಳದ ಪ್ರದೇಶವನ್ನು ಸೌರವ್ಯೂಹವೆನ್ನುತ್ತಾರೆ. ನಮ್ಮ ಸೌರವ್ಯೂಹದಲ್ಲಿ ಸೂರ್ಯ ಮತ್ತು ಚಂದ್ರರನ್ನು ನಾವು ಕಾಣುತ್ತೇವೆ. ಚಂದ್ರಗೋಳವು ಭೂ ಗ್ರಹದ ಉಪಗ್ರಹವೆಂದು ವಿಜ್ಞಾನಿಗಳು ಸಾರಿದ್ದಾರೆ. ಈ ಎರಡು ಗ್ರಹಗಳಲ್ಲದೆ ನಕ್ಷತ್ರಗಳು, ಸೂರ್ಯನ ಶಾಖವನ್ನೂ ಬೆಳಕನ್ನೂ ಮೀರಿಸುವವುಗಳು ಕೆಲವಿದ್ದರೂ ಅವುಗಳು ಅಗಾಧ ದೂರದಲ್ಲಿರುವುದರಿಂದ ಅವುಗಳ ಶಾಖ ನಮಗೆ ತಟ್ಟುವುದಿಲ್ಲ. ಪೂರ್ವದಲ್ಲಿ ಉದಯಿಸುವ ಸೂರ್ಯನು ತನ್ನ ಚಲನೆಯನ್ನು ಕೆಲವೊಂದು ನಕ್ಷತ್ರ ಪುಂಜಗಳ ಮೂಲಕ ನಡೆಸುತ್ತಾನೆ. ಈ ಪುಂಜಗಳೇ ರಾಶಿಗಳು. ಇವುಗಳು ನಮ್ಮ ಸೌರವ್ಯೂಹದಲ್ಲಿ ಮೇಷ, ವೃಷಭ, ಮಿಥುನ..... ಹೀಗೆ ಹನ್ನೆರಡು ಇವೆ. ಭೂಮಧ್ಯ ರೇಖೆಯಿಂದ $23^1/_2$ ಡಿಗ್ರಿ ಉತ್ತರ ಮತ್ತು $23^1/_2$ ಡಿಗ್ರಿ ದಕ್ಷಿಣ ಇದು ಸೂರ್ಯನ ಚಲನೆಯ ಪಥ. ಉತ್ತರಕ್ಕೆ ತುದಿಯಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತವಿದ್ದರೆ ದಕ್ಷಿಣದಲ್ಲಿ ಮಕರಸಂಕ್ರಾತಿ ವೃತ್ತವಿದೆ. ಈ ಎರಡು ರೇಖೆಗಳ ನಡುವೆ 6 ತಿಂಗಳ ಚಲನೆ ಸೂರ್ಯನದ್ದಿರುತ್ತದೆ. ಕರ್ಕಾಟಕ ವೃತ್ತದಿಂದ ದಕ್ಷಿಣಕ್ಕೆ ಬರುವ ಕಾಲ ದಕ್ಷಿಣಾಯನ ವೆಂತಲೂ, ಮಕರ ವೃತ್ತದಿಂದ ಉತ್ತರಕ್ಕೆ ಚಲಿಸುವ ಕಾಲವನ್ನು ಉತ್ತರಾಯಣವೆಂತಲೂ ಹೇಳಲಾಗುತ್ತದೆ. ಜನವರಿ ತಿಂಗಳ ದಿನಾಂಕ 14ರಂದು ಸೂರ್ಯನು ದಕ್ಷಿಣದ ಮಕರವೃತ್ತದಿಂದ ಉತ್ತರಕ್ಕೆ ಹೊರಳುವ ದಿನವೇ ಮಕರ ಸಂಕ್ರಾಂತಿ. ಎಂದರೆ ಒಂದು ರಾಶಿಯಿಂದ ಸೂರ್ಯನು ಮತ್ತೊಂದು ರಾಶಿಗೆ ದಾಟುವುದು. ಇಲ್ಲಿ ಧನುರಾಶಿಯಿಂದ ಸೂರ್ಯನು ಮಕರರಾಶಿಗೆ ದಾಟುತ್ತಾನೆ. ಈ ಕಾಲವನ್ನು ಪುಣ್ಯಕಾಲವೆಂದು ಪ್ರಾಚೀನ ಕಾಲದಿಂದಲೂ ಆಚರಿಸುತ್ತಾ ಬಂದಿದ್ದಾರೆ. ನಮ್ಮ (ಮಾನವರ) ಒಂದು ವರ್ಷವು ದೇವತೆಗಳಿಗೆ ಒಂದು ದಿನ. ಹಾಗಾಗಿ 6 ತಿಂಗಳು (ಉತ್ತರಾಯಣ ಅವರಿಗೆ ಹಗಲು; ದಕ್ಷಿಣಾಯನ ರಾತ್ರಿ. ಭೀಷ್ಮಾಚಾರ್ಯರು ಇಚ್ಛಾಮರಣಿಯಾದುದರಿಂದ ದಕ್ಷಿಣಾಯನ ದಲ್ಲಿ ಸ್ವರ್ಗ ಪ್ರವೇಶ ಮಾಡದೆ 58 ದಿನಗಳ ತನಕ ಶರಶಯ್ಯೆಯಲ್ಲಿದ್ದು ಉತ್ತರಾಯಣ ಬಂದ ಮೇಲೆಯೇ ಪ್ರಾಣತ್ಯಾಗ ಮಾಡಿದರೆಂದಿದೆ. ಮೇಷಾದಿ 12 ರಾಶಿಗಳಲ್ಲಿ ಒಂದೊಂದೇ ರಾಶಿಯಲ್ಲಿ ಸೂರ್ಯನು ಸಂಚರಿಸುತ್ತಾನೆ. ಮಕರರಾಶಿಗೆ ಪ್ರವೇಶಿಸುವ ದಿನವೇ ಮಕರ ಸಂಕ್ರಾಂತಿ. ಈ ಕಾಲವನ್ನು ಪುಣ್ಯಕಾಲ ಎನ್ನಲಾಗುತ್ತದೆ. ಈ ಸಮಯದಲ್ಲಿ ಪವಿತ್ರ ನದಿಗಳಲ್ಲಿ ಸ್ನಾನ, ಸೂರ್ಯ ದೇವನಿಗೆ ನೈವೇದ್ಯ ಸಮರ್ಪಣೆ, ದಾನ–ದಕ್ಷಿಣೆ ನೀಡುವುದು ಇತ್ಯಾದಿ ಪುಣ್ಯಕರವಾಗಿದೆ. ಹಳ್ಳಿಗಳಲ್ಲಿ ಇಂದಿಗೂ ಜನರು ಪ್ರಾತಃಕಾಲ ಎದ್ದೊಡನೆ ಶುಚೀರ್ಭೂತರಾಗಿ ವಿಭೂತಿ ಧರಿಸಿ ಸೂರ್ಯನನ್ನು ವಂದಿಸುತ್ತಾರೆ.

ಉತ್ತರ ಭಾರತದ ಕೆಲವೆಡೆ ಲೋಹ್ರಿ, ಕಿಚ್‌ಡಿ, ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಉತ್ತರಾಯಣ್, ಅಸ್ಸಾಂನಲ್ಲಿ ಬೊಗಲಬಹು, ಕರ್ನಾಟಕ, ಆಂಧ್ರ, ತೆಲಂಗಾಣಗಳಲ್ಲಿ ಸಂಕ್ರಾಂತಿ, ಉತ್ತರಾಖಂಡದಲ್ಲಿ ಮಕರ ಸಂಕ್ರಾಂತಿ, ತಮಿಳುನಾಡು ಮತ್ತು ಶ್ರೀಲಂಕಾದಲ್ಲಿ ಪೊಂಗಲ್, ನೇಪಾಲದಲ್ಲಿ ಮಘಿ, ಥಾಯ್ಲಾಂಡ್‌ನಲ್ಲಿ ಸೊಂಕ್ರಾನ್, ಮ್ಯಾನ್ಮಾರ್‌ನಲ್ಲಿ ಥಿಂಗ್ಯಾನ್ ಹೀಗೆಲ್ಲಾ ಕರೆಯುತ್ತಾರೆ.

**ತೀರ್ಥಸ್ನಾನ :** ಸಮುದ್ರ ಮಥನದಲ್ಲಿ ಉದ್ಭವವಾದ ಅಮೃತವನ್ನು ರಕ್ಕಸರಿಗೆ ತಪ್ಪಿಸಿ, ದೇವತೆಗಳಿಗೆ ಮಾತ್ರವೇ ಕೊಡಲು ಅಮೃತಕುಂಭವನ್ನು ಮೋಹಿನಿ ವೇಷಧಾರಿ ಯಾದ ಮಹಾವಿಷ್ಣುವು ಹೊತ್ತೊಯ್ಯುವಾಗ ಅಲ್ಲಲ್ಲಿ ಉಜ್ಜೈನಿ, ನಾಸಿಕ, ಹರಿದ್ವಾರ ಮತ್ತು ತ್ರಿವೇಣೀ ಸಂಗಮ(ಪ್ರಯಾಗ)ಗಳಲ್ಲಿ ದಾರಿಯಲ್ಲಿ ಕೆಲವು ಬಿಂದುಗಳು ಚೆಲ್ಲಿದುವಂತೆ. ಇದರಿಂದಾಗಿ ಆ ಎಲ್ಲಾ ಸ್ಥಳಗಳು ಪವಿತ್ರ ಎನ್ನಲಾಗುತ್ತದೆ. ಈ ನಾಲ್ಕು ಸ್ಥಳಗಳಲ್ಲಿ ಕುಂಭ ಮೇಳ ನಡೆಯುತ್ತದೆ. ಸೂರ್ಯನ ಕಿರಣಗಳಿಗೆ ಮೈಯ್ಯೊಡ್ಡಿ ಆರೋಗ್ಯವೃದ್ಧಿಸಿಕೊಳ್ಳಲು ಈ ಸಮಯ ಗಾಳಿಪಟ ಉತ್ಸವಾಚರಣೆ ಇದೆ.

ಉಡುಪಿ, ಗುರುವಾಯೂರು, ಎಡನೀರು, ತಿರುವನಂತಪುರ, ಪೆರ್ಡೂರು ಮುಂತಾದ ವಿಷ್ಣು ದೇವಾಲಯಗಳಲ್ಲಿ ಸಂಕ್ರಾಂತಿ ಹಬ್ಬವು ವಿಶೇಷ. ಶ್ರೀ ಕೃಷ್ಣನ ವಿಗ್ರಹದ ಸ್ಥಾಪನೆ ಉಡುಪಿಯಲ್ಲಿ ಸಂಕ್ರಾಂತಿಯ ದಿನದಿಂದಾಗಿತ್ತು ಎನ್ನುತ್ತಾರೆ. ಹಾಗಾಗಿ ಈ ದಿನ ಸಪ್ತೋತ್ಸವ, ಚೂರ್ಣೋತ್ಸವ ಇತ್ಯಾದಿ ಸಂಭ್ರಮಗಳಿವೆ. ಪರ್ಯಾಯವೂ ಸಂಕ್ರಾಂತಿ ಸಂಭ್ರಮದಲ್ಲೇ ನಡೆಯುತ್ತದೆ. "ಎಳ್ಳು ತಿಂದು ಒಳ್ಳೆಯ ಮಾತಾಡು" ಎಂಬ ನಾಣ್ನುಡಿ ಇದೆ. ಮಕರ ಸಂಕ್ರಾತಿಯಂದು ಎಳ್ಳು, ಬೆಲ್ಲ, ಕೊಬ್ಬರಿ, ಕಬ್ಬು, ಬಾಳೆಹಣ್ಣು ಇತ್ಯಾದಿಗಳನ್ನು ತಿನ್ನುತ್ತಾರೆ ಮತ್ತು ಬೇರೆಯವರಿಗೆ ಹಂಚುತ್ತಾರೆ. ಸಂಕ್ರಾಂತಿ ಯಂದು ಬೆಳಿಗ್ಗೆ ಎಳ್ಳೆಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುತ್ತಾರೆ. ದೇವರಿಗೆ ಎಳ್ಳೆಣ್ಣೆಯಲ್ಲಿ ದೀಪ ಹಚ್ಚುತ್ತಾರೆ. ತಮಿಳುನಾಡಿನಲ್ಲಿ ಈ ಹಬ್ಬವನ್ನು ಪೊಂಗಲ್ ಹೆಸರಿನಿಂದ ಆಚರಿಸಿ, 'ಪೊಂಗಲ್' ಎಂಬ ಭಕ್ಷ್ಯ ವಿಶೇಷವನ್ನು ನಾಲ್ಕು ವಿಧಗಳಲ್ಲಿ ತಯಾರಿಸಿ, ದೇವರಿಗೂ, ಗೋವುಗಳಿಗೂ ಸಮರ್ಪಿಸಿ ತಿನ್ನುತ್ತಾರೆ. ದನಗಳನ್ನು ಮೈ ತೊಳಸಿ, ಗಂಧ–ಅರಸಿನ ಹಣೆಗೆ ಹಚ್ಚಿ, ಕೊಂಬುಗಳಿಗೆ ಕೆಂಪು, ಹಳದಿ ಮತ್ತು ನೀಲಿ ಬಣ್ಣ ಹಚ್ಚಿ ಸಿಂಗರಿಸಿ, ಕುತ್ತಿಗೆಗೆ ಹೂ ಮಾಲೆ ಹಾಕಿ ಪೂಜೆ ಮಾಡಿ ಪೊಂಗಲ್ ತಿನ್ನಿಸುತ್ತಾರೆ. ಬಯಲು ಪ್ರದೇಶದಲ್ಲಿ ಯುವಕರು, ಎತ್ತುಗಳು ಉರಿಯುವ ಬೆಂಕಿಯನ್ನು ಹಾರಿ ಓಡುವಂತೆ ಮಾಡುತ್ತಾರೆ. (ಇದು ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ದಿಂದ ಪ್ರತಿಬಂಧಿಸಲ್ಪಟ್ಟಿದೆ.) ಇದಕ್ಕೆ 'ಜಲ್ಲಿಕಟ್ಟು' ಎನ್ನುತ್ತಾರೆ. ಈ ಆಟಗಳು ಹೆಚ್ಚಾಗಿ ಹಳ್ಳಿಗಳಲ್ಲಿ ಮಾತ್ರ ನಡೆಯುತವೆ.

**ಮಕರ ಜ್ಯೋತಿ :** ಕೇರಳದ ಶಬರಿಮಲೆಯ ಅಯ್ಯಪ್ಪಸ್ವಾಮಿ ದೇವಾಲಯಕ್ಕೆ ಮಕರ ಸಂಕ್ರಾಂತಿಯ ಸಮಯದಲ್ಲಿ ಲಕ್ಷಾಂತರ ಮಂದಿ ಭಕ್ತಾದಿಗಳು ದೇಶದುದ್ದಗಲದಿಂದ ಆಗಮಿಸುತ್ತಾರೆ. 'ಮಕರ ಸಂಕ್ರಾತಿಯ ದಿನ ಅಲ್ಲಿನ ಗುಡ್ಡವೊಂದರ ಮೇಲೆ ಗೋಚರವಾಗುವ 'ಮಕರ ಜ್ಯೋತಿ'ಯು ಇಲ್ಲಿನ ವಿಶೇಷ. ಭಕ್ತಾದಿಗಳು ವ್ರತಾಚರಣೆ ಮಾಡಿ ಅಯ್ಯಪ್ಪ ಸ್ವಾಮಿ ಮತ್ತು ಮಕರ ಜ್ಯೋತಿಯ ದರ್ಶನಕ್ಕಾಗಿ ಶಬರಿಮಲೆಗೆ ತೆರಳುತ್ತಾರೆ.

ಈ ವರ್ಷ (2017) ಜನವರಿ 14ರ ಶನಿವಾರ ಮಕರ ಸಂಕ್ರಾಂತಿ ಬರಲಿದೆ. ಆ ದಿನ ಬೆಳಗಿನ 7.50ರಿಂದ ಸಂಜೆ 6.08 ರವರೆಗೆ ಈ ಪುಣ್ಯಕಾಲದ ಅವಧಿ ಇರುತ್ತದೆ. ಸಂಕ್ರಾಂತಿಯ ಕಾಲದಲ್ಲಿ ಜಪ, ತಪ, ಧ್ಯಾನ, ಸೂರ್ಯ ಮಂತ್ರ ಪಠನ, ತೀರ್ಥಸ್ನಾನ ಇತ್ಯಾದಿಗಳು ನಮ್ಮ ಪಾಪವನ್ನು ತೊಳೆದು ಪುಣ್ಯವನ್ನುಂಟು ಮಾಡುತ್ತವೆ. ದವಸ ಧಾನ್ಯಗಳ, ಬೆಳೆಗಳ ಕಟಾವಿನ ಸುಗ್ಗಿಯ ಹಬ್ಬವು ಮಕರ ಸಂಕ್ರಾಂತಿ, ವಿದ್ಯಾದೇವಿಯನ್ನು ಸರಸ್ವತೀ ದೇವಿಯನ್ನು, ನಮ್ಮ ಗುರುಹಿರಿಯರು ಹಾಗೂ ಪೂರ್ವಿಕರನ್ನು ಪೂಜಿಸುವ, ಗೌರವಿಸುವ ದಿನವೇ ಈ ಸಂಕ್ರಾತಿ ಆಗಿರುತ್ತದೆ. ದುಷ್ಟರಾವಣನ ಸಂಹಾರದ ದಿನವೆಂತಲೂ, ಸೀತಾದೇವಿಯನ್ನು ಅಯೋಧ್ಯೆಗೆ ಮರಳಿ ಕರೆತಂದ ದಿನವೆಂತಲೂ ಆಂಧ್ರದವರು ಸಂಕ್ರಾಂತಿಯನ್ನು ತಿಳಿಯುತ್ತಾರೆ. ವರ್ಷದಲ್ಲಿ ಸೂರ್ಯನು 12 ರಾಶಿಗಳಲ್ಲಿ ಸರದಿ ಪ್ರಕಾರ ಸಂಚರಿಸುವುದರಿಂದ 12 ಬಾರಿ ಸಂಕ್ರಾಂತಿಗಳು ಬರುತ್ತದೆ. ಈ ಎಲ್ಲಾ ಸಂಕ್ರಾಂತಿಗಳಲ್ಲಿ ಉತ್ತರಾಯಣ ಆರಂಭವಾಗುವ 'ಉತ್ತರಾಯಣ ಪುಣ್ಯಕಾಲ'ವೆಂದು ಕರೆಯಲ್ಪಡುವ 'ಮಕರ ಸಂಕ್ರಾಂತಿ'ಯು ಶ್ರೇಷ್ಠವಾದುದು.

"ಸರ್ವರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು

## ಪ್ರವಾಸ :

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.12-02-2017ರ ರವಿವಾರದಂದು ಕೊಲ್ಲೂರು-ಕೊಡಚಾದ್ರಿಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 6 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ಅಂದಾಜು ತಲಾ ರೂ.600/-.

ತಮ್ಮ ಹೆಸರುಗಳನ್ನು ತಾ.05-02-2017ರ ಮೊದಲು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (0820-2520754), ಯುವ ವೇದಿಕೆಯ ಅಧ್ಯಕ್ಷ ಶ್ರೀ ಕೃಷ್ಣರಾಜ್ (9164581333) ಅಥವಾ ಸಂಚಾಲಕ ಶ್ರೀ ವಸಂತರಾವ್ ಕರಂಬಳ್ಳಿ (9632291183) ಇವರಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

## ತಾ.22-01-2017ನೇ ಆದಿತ್ಯವಾರ ಶ್ರೀ ಶಾರದಾ ಮಂಟಪದಲ್ಲಿ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಹಿರಿಯ ನಾಗರಿಕರಿಗೆ ನಡೆಯುವ ಸ್ಪರ್ಧೆಗಳ ವಿವರ

| | | | | |
|---|---|---|---|---|
| 1. | 3 ವರ್ಷದ ಒಳಗಿನ ಮಕ್ಕಳಿಗೆ | : | ಅ) | ಬಲೂನು ಹೆಕ್ಕಿ ತರುವುದು. |
| 2. | 3-5 ವರ್ಷದ ಒಳಗಿನ ಮಕ್ಕಳಿಗೆ | : | ಅ) | ದಿಂಬು ಪಾಸ್ ಮಾಡುವುದು |
| | | | ಬ) | ಮಣಿಗಳನ್ನು ಬೇರ್ಪಡಿಸುವುದು. |
| 3. | 1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ | : | ಅ) | ಲಿಂಬೆ ಹಣ್ಣಿನ ಓಟ |
| | | | ಬ) | ಬಕೆಟಿಗೆ ಬಾಲ್ ಹಾಕುವುದು. |
| 4. | 4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ | : | ಅ) | ಗ್ಲಾಸ್‌ಗಳಿಂದ ಪಿರಮಿಡ್ ಮಾಡುವುದು |
| | | | ಬ) | ಬಲೂನು ಊದಿ ಒಡೆಯುವುದು. |
| 5. | 7ರಿಂದ 9ನೇ ತರಗತಿವರೆಗಿನ ಮಕ್ಕಳಿಗೆ | : | ಅ) | ಸೂಜಿಗೆ ನೂಲು ಹಾಕುವುದು. |
| | | | ಬ) | ಸ್ಟ್ರಾದಲ್ಲಿ ಊದಿ ಬಾಲನ್ನು ಗ್ಲಾಸಿಗೆ ಹಾಕುವುದು. |
| 6. | 10ರಿಂದ 12ನೇ ತರಗತಿವರೆಗಿನ ಮಕ್ಕಳಿಗೆ | : | ಅ) | ಸ್ಟ್ರಾಗಳನ್ನು ಜೋಡಿಸುವುದು. |
| 7. | 18 ವರ್ಷ ಮೇಲ್ಪಟ್ಟವರಿಗೆ | : | ಅ) | ಬಾಂಬಿಗ್ ದ ಸಿಟಿ |
| 8. | 60 ವರ್ಷ ಮೇಲ್ಪಟ್ಟವರಿಗೆ | : | ಅ) | ಒಂದೇ ಬೆಂಕಿಕಡ್ಡಿಯಲ್ಲಿ ಮೇಣದ ಬತ್ತಿಗಳನ್ನು ಉರಿಸುವುದು. |
| 9. | 70 ವರ್ಷ ಮೇಲ್ಪಟ್ಟವರಿಗೆ | : | ಅ) | ಗೋಲಿಗಳನ್ನು ಕಾಲಿನಲ್ಲಿ ಹೆಕ್ಕುವುದು. |
| 10. | ಹಿರಿಯ ನಾಗರಿಕರು (ಗಂಡಸರಿಗೆ) | : | ಅ) | ಕೋಲಿಗೆ ರಿಂಗ್ ಹಾಕುವುದು. |

**ಸ್ಪರ್ಧಾಳುಗಳು ಬೆಳಿಗ್ಗೆ 9-00 ಗಂಟೆಗೆ ಹಾಜರಿರಬೇಕಾಗಿ ವಿನಂತಿ**

**ಬಹುಮಾನಗಳನ್ನು ಮಧ್ಯಾಹ್ನ ನಡೆಯಲಿರುವ ಸಭಾ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು**

-ಅಧ್ಯಕ್ಷರು, ಮಹಿಳಾ ವೇದಿಕೆ

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

## ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ



ತಾ.24-02-2017, ಶುಕ್ರವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ



## ಶ್ರೀಶಾರದಾ ದೇವಸ್ಥಾನಕ್ಕೆ ಅಲ್ಮೇರಾದ ಕೊಡುಗೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿಯ ಯುವ ವೇದಿಕೆಯ ಸದಸ್ಯರು ಅದರ ಅಧ್ಯಕ್ಷರು ಶ್ರೀ ಉಂಡಾರು ಕೃಷ್ಣಾನಂದ ರಾವ್ ಇವರ ಮುತುವರ್ಜಿಯಲ್ಲಿ ಶ್ರೀ ಶಾರದಾ ದೇವಸ್ಥಾನಕ್ಕೆ ಗೋದ್ರೆಜ್‌ನ ಅಲ್ಮೇರಾವನ್ನು ನೀಡಿರುತ್ತಾರೆ. ಅವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕೃತಜ್ಞತೆಗಳು.

## ಶ್ರೀಮತಿ ಪಿ.ಪ್ರಸನ್ನ ಕುಮಾರಿಯವರ ಸಂಮಾನ ಸಮಾರಂಭ



ದಿನಾಂಕ 10-12-2016 ರಂದು ಸರಕಾರಿ ಸಂಯುಕ್ತ ಪ್ರೌಢಶಾಲಾ ವಾರ್ಷಿಕೋತ್ಸವದಂದು ಶಿಕ್ಷಣ ಕ್ಷೇತ್ರದ ಸಂಪನ್ಮೂಲ ವ್ಯಕ್ತಿ, ಬಹುಮುಖ ಪ್ರತಿಭೆಯ ಶ್ರೀಮತಿ ಪಿ.ಪ್ರಸನ್ನ ಕುಮಾರಿ ಇವರು ಶಿಕ್ಷಕಿಯಾಗಿ, ಪ್ರಭಾರ ಮುಖ್ಯಶಿಕ್ಷಕಿಯಾಗಿ, ಸರಕಾರಿ ಸಂಯುಕ್ತ ಪ್ರೌಢಶಾಲೆ ಯರ್ಲಪಾಡಿ ಇಲ್ಲಿ 25 ವರ್ಷಗಳ ಸೇವೆಯನ್ನು ಸಲ್ಲಿಸಿ, ನಿವೃತ್ತರಾದ ಸುಸಂದರ್ಭದಲ್ಲಿ ಅವರ ಅಭಿಮಾನಿ ಬಳಗ ಗೌರವಾದರಗಳಿಂದ ಸನ್ಮಾನಿಸಿತು. ಸನ್ಮಾನಿತರಿಗೆ ಶಾಲು, ಹಾರ, ಫಲಪುಪ್ಪ ಹಾಗೂ ಚಿನ್ನದ ಉಂಗುರ ಮತ್ತು ಅವರ ಪತಿ ಶ್ರೀ ಕೆ.ಅನಂತಪಟ್ಟಾಭಿಯವರಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಕಾರ್ಕಳ ಶಾಸಕರಾದ ಸುನೀಲ್ ಕುಮಾರ್ ಮಾಜಿ ಶಾಸಕರಾದ ಗೋಪಾಲಭಂಡಾರಿ, ಮುಖ್ಯ ಶಿಕ್ಷಕರು, ಗ್ರಾಮ ಪಂಚಾಯತ್ ಅಧ್ಯಕ್ಷರು, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು, ಶಿಕ್ಷಣ ಸಂಯೋಜಕರು ಉಪಸ್ಥಿತರಿದ್ದರು.

ಶ್ರೀಮತಿ ಪ್ರಸನ್ನ ಕುಮಾರಿಯವರು ಒಂದೇ ಶಾಲೆಯಲ್ಲಿ 25 ವರ್ಷಗಳ ಸೇವೆ ಸಲ್ಲಿಸಿದ ನೆನಪಿಗಾಗಿ ಶಾಲೆಗೆ 25,000/-ದೇಣಿಗೆ ನೀಡಿದರು. ಅಲ್ಲದೆ ಸುಮಾರು 600 ಮಂದಿಗೆ ಭೋಜನದ ವ್ಯವಸ್ಥೆಯನ್ನು ಮಾಡಿದರು. ಈ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ವಿದ್ಯಾಭಿಮಾನಿಗಳು, ಹಿತೈಷಿಗಳು, ಹಳೆ ವಿದ್ಯಾರ್ಥಿಗಳು ಆಗಮಿಸಿ ಪಿ. ಪ್ರಸನ್ನ ಕುಮಾರಿಯವರನ್ನು ಅಭಿನಂದಿಸಿದರು.


## ಶ್ರೀ ಶ್ರೀನಿವಾಸ ದೇವಸ್ಥಾನ ತಲೇಕಿ, ಕಡಬ, ದ.ಕ.

ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ
ದಿವ್ಯ ಹಸ್ತದಿಂದ ಪುನಃ ಪ್ರತಿಷ್ಠಾಪಿಸಲ್ಪಟ್ಟ ತಲೇಕ ಶ್ರೀ ಶ್ರೀನಿವಾಸ ದೇವಸ್ಥಾನದ

**30ನೇ “ಪ್ರತಿಷ್ಠಾ ವಾರ್ಷಿಕೋತ್ಸವವು’**

ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ಇದೇ ತಾ.03-02-2017ನೇ ಶುಕ್ರವಾರ ಜರಗಲಿರುವುದು. ತಾ.02-02-2017 ಗುರುವಾರ ರಾತ್ರಿ ಕೊಲ್ಲಂಗಾನ ಮೇಳದವಳರಿಂದ ಯಕ್ಷಗಾನ ಬಯಲಾಟ ಜರಗಲಿರುವುದು.

ಸಮಾಜಬಾಂಧವರೆಲ್ಲರಿಗೂ ಸ್ವಾಗತ ಬಯಸುವ

ಶ್ರೀ ಭರತೇಶ್ವರ ಶರ್ಮ ಮುಂಬಯಿ, ಸಂಚಾಲಕರು
ಪ್ರಕಾಶ್ ರಾವ್ ಕಡಬ ಬೆಂಗಳೂರು ಮತ್ತು ಕಡಬ ಸಹೋದರರು
ಆಡಳಿತ ಮಂಡಳಿ ಸದಸ್ಯರು. ಮೊ: 9448160085, 9901364676
ಶ್ರೀ ಹರ್ಷಕುಮಾರ್ ಕೇದಗೆ, ಪ್ರಮೋದ್ ಆಟೋಮೊಬೈಲ್ಸ್ ಕರಂಗಲ್‌ಪಾಡಿ,
ಮಂಗಳೂರು. ಮೊ:9448260225 (ವಾರ್ಷಿಕೋತ್ಸವದ ಪ್ರಾಯೋಜಕರು)

ವಿ.ಸೂ.: ಈ ಸಂದರ್ಭದಲ್ಲಿ ಮದುವೆ ಮತ್ತು ಉಪನಯನ ಮಾಡುವರೇ ಉಚಿತ ಅವಕಾಶ ಕಲ್ಪಿಸಲಾಗಿದೆ.



ಎಮ್. ದೇವಾನಂದ್ ಭಟ್ Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


## ಶ್ರೀ.ಮ.ನಾ.ಹೆಬ್ಬಾರರಿಂದ ಪ್ರೌಢ ಶಾಲೆಗಳಲ್ಲಿ ಭಾಷಣ ಕಾರ್ಯಕ್ರಮಗಳು




ಮಲ್ಪೆ ಲಯನ್ಸ್ ಕ್ಲಬ್‌ನವರು ಪ್ರಾಯೋಜಿಸಿದ ಸರಣಿ ಕಾರ್ಯಕ್ರಮದನ್ವಯ ಹರಿದಾಸರೂ, ನಿವೃತ್ತ ಉಪನ್ಯಾಸಕರೂ ಆಗಿರುವ ಶ್ರೀ ಮ.ನಾ ಹೆಬ್ಬಾರರು ಉಡುಪಿ ಆಸುಪಾಸಿನ ಪ್ರೌಢಶಾಲೆಗಳಲ್ಲಿ ನೈತಿಕ ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳ ಕುರಿತು ಭಾಷಣ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಇಂದಿರಾನಗರ ಪ್ರೌಢಶಾಲೆ, ಉದ್ಯಾವರ ಪ.ಪೂರ್ವ ಕಾಲೇಜುಗಳಲ್ಲಿ ಭಾಷಣ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವರು. ನಿವೃತ್ತ ಪ್ರಾಂಶುಪಾಲರಾದ ಶ್ರೀ.ಪಿ.ವಾಸುದೇವ ರಾವ್, ಉದ್ಯಮಿ ಶ್ರೀ ತಲ್ಲೂರು ಶಿವರಾಮ ಶೆಟ್ಟಿ ಇವರುಗಳು ಶ್ರೀ ಹೆಬ್ಬಾರರ ಜತೆಗಿದ್ದು, ಶ್ರೀ ತಲ್ಲೂರು ಶಿವರಾಮ ಶೆಟ್ಟಿಯವರು ಬರೆದ ಮತ್ತು ಪ್ರಾಯೋಜಿಸಿದ ನೀತಿ ಸಂಹಿತೆ ಮತ್ತು ಭಗವದ್ಗೀತೆಯ ಪುಸ್ತಕಗಳನ್ನು ಈ ಎಲ್ಲಾ ಶಾಲೆಗಳ ವಾಚನಾಲಯಗಳಿಗೆ ಉಚಿತವಾಗಿ ಹಂಚಲಾಯಿತು.

## ಶಾಸ್ತ್ರೀಯ ಭಕ್ತಿಗಾಯನ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ



ಕರ್ನಾಟಕ ಸರಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಜರಗಿದ ‘ಶಾಸ್ತ್ರೀಯ ಭಕ್ತಿಗಾಯನ ಸ್ಪರ್ಧೆಯಲ್ಲಿ ಉಡುಪಿಯ ಶ್ರೀ ಪೂರ್ಣ ಪ್ರಜ್ಞ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಸಾಗರ್ ಪಿ. ಇವನು ಪ್ರಥಮ ಬಹುಮಾನವನ್ನು ಪಡೆದಿರುತ್ತಾನೆ. ಉಡುಪಿ ತಾಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಎರಡರಲ್ಲೂ ಪ್ರಥಮ ಸ್ಥಾನ ಪಡೆದಿದ್ದು, ವಿಭಾಗ ಮಟ್ಟದಲ್ಲಿ ದ್ವಿತೀಯ ಸ್ಥಾನಿಯಾಗಿದ್ದು, 28-12-2016ರಂದು ವಿಜಯಪುರ (ಬಿಜಾಪುರ) ದಲ್ಲಿ ಜರಗಿದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ, ಫಲಕ. ಮೆಡಲ್, ನಗದು ಮತ್ತು ಪ್ರಮಾಣ ಪತ್ರಗಳನ್ನು ಪಡೆದಿರುತ್ತಾನೆ. ಇವನು ಸುಳ್ಯ ತಾಲೂಕು ಪೆರುವಾಜೆಯ ಶ್ರೀ ಮನೋಹರ್ ಮತ್ತು ಶ್ರೀಮತಿ ಸುನೀತಾ ಇವರ ಸುಪುತ್ರನು. ಹರಿದಾಸ ಶ್ರೀ ಮ.ನಾ.ಹೆಬ್ಬಾರರ ಮೊಮ್ಮಗನಾಗಿರುವನು. ಇವನಿಗೆ ‘ಶ್ರೀ ಶಾರದಾ’ ಬಳಗದ ಅಭಿನಂದನೆಗಳು.

## ಭಾಗವತ ಚಂದ್ರಕಾಂತ ರಾಯರಿಗೆ ಸನ್ಮಾನ



ನಮ್ಮ ಸಮಾಜದ ಪ್ರಸಿದ್ಧ ಭಾಗವತರಾದ ಮೂಡುಬೆಳ್ಳೆಯ ಶ್ರೀ ಚಂದ್ರಕಾಂತ ರಾಯರಿಗೆ ದಿನಾಂಕ 25-12-2016ರಂದು ಇತ್ತೀಚೆಗೆ ಕಾರ್ಕಳದಲ್ಲಿ ಅಭಿಮಾನಿಗಳಿಂದ ಸನ್ಮಾನ ಕಾರ್ಯಕ್ರಮವು ಜರಗಿತು. ಅವರು ಮೂಡುಬೆಳ್ಳೆಯ ಶ್ರೀ ವೆಂಕಟ್ರಮಣ ರಾವ್ ಹಾಗೂ ಶ್ರೀಮತಿ ಮೋಹಿನಿಯವರ ಪುತ್ರ.





With Best Compliments From :

Ph : 98459 92859

Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಮಂಗಳೂರಿನಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾವೇಶ–2016 ಸಂಪನ್ನ

...1ನೇ ಪುಟದಿಂದ

ಜರಗಿತು. ತಾ.18–12–2016ನೇ ರವಿವಾರ ಪೂರ್ವಾಹ್ನ 7 ಗಂಟೆಗೆ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ, ಲಲಿತಾಸಹಸ್ರನಾಮ ಮತ್ತು ರುದ್ರ ಪಠನ ಕಾರ್ಯಕ್ರಮ ಜರಗಿತು. ನಂತರ 10 ಗಂಟೆಗೆ ಸಭಾಂಗಣದಲ್ಲಿ ಸಮಾಜವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ವಿಚಾರಗೋಷ್ಠಿಯು ಆರಂಭವಾಯಿತು. ಡಾ। ವೈ.ಸುದರ್ಶನ್ ರಾವ್, ಶ್ರೀ ಕೆ.ಪ್ರಭಾಕರ ರಾವ್, ಶ್ರೀಮತಿ ಕವಿತಾ ಶಾಸ್ತ್ರಿ ಹಾಗೂ ಡಾ.ವೀಣಾ ಫಾಲಚಂದ್ರ ಇವರು ವಿವಿಧ ಗೋಷ್ಠಿಗಳಿಗೆ ಅಧ್ಯಕ್ಷರಾಗಿದ್ದರು. ಶ್ರೀ ಎಂ.ಎಸ್.ರಾಧಾಕೃಷ್ಣ ರಾವ್, ಶ್ರೀ ಚಂದ್ರಕಾಂತ ರಾವ್ ಇನ್ನಾ, ಶ್ರೀ ಮನೋಹರ ಪ್ರಸಾದ ಹಾಗೂ ಶ್ರೀ ಬಿ. ಬಾಲಚಂದ್ರ ರಾವ್ ಇವರು ವಿಚಾರಗಳನ್ನು ಮಂಡಿಸಿದರು. ನಂತರ ಶ್ರೀ ಎಂ.ಆರ್.ವಾಸುದೇವ ಇವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ನಮ್ಮ ಸಮಾಜದ ಬೇರೆ ಬೇರೆ ಊರುಗಳಲ್ಲಿರುವ ಸಂಘಟನೆಗಳ ಅಧ್ಯಕ್ಷರುಗಳು ವೇದಿಕೆಯಲ್ಲಿ ಸಮಾವೇಶಗೊಂಡು ತಮ್ಮ ಸಂಘಗಳು ನಡೆಸುತ್ತಿರುವ ಕಾರ್ಯಕ್ರಮಗಳು ಹಾಗೂ ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು. ನಂತರ ಶ್ರೀ ಎಂ.ಆರ್. ವಾಸುದೇವ ಇವರ ಅಧ್ಯಕ್ಷತೆಯಲ್ಲಿ ಸಮಾರೋಪ ಕಾರ್ಯಕ್ರಮವು ನೆರವೇರಿತು. ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಹಾಗೂ ಶ್ರೀ ಎನ್.ಕೆ.ಜಗನ್ನಿವಾಸ ರಾಯರು ಅಭ್ಯಾಗತರಾಗಿದ್ದರು. ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿ ಸಮಾವೇಶವು ಮುಕ್ತಾಯವಾಯಿತು.

## ಕಿರಣ್ ಕುಮಾರ್‌ಗೆ ಸಿಎಫ್‌ಪಿ ಮಾನ್ಯತೆ



ಮಂಗಳೂರಿನ ಲೇಡಿಹಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಥಿಕ ನಿರ್ವಹಣಾ ತಜ್ಞ ಬ್ರಹ್ಮಾವರದ ಕಿರಣ್‌ಕುಮಾರ್ ಎಂ. ಅವರಿಗೆ ಸಿಎಫ್‌ಪಿ (ಸರ್ಟಿಫೈಡ್ ಫೈನಾನ್ಶಿಯರ್ ಪ್ಲಾನರ್) ಮಾನ್ಯತೆ ದೊರಕಿದೆ. ಅಮೆರಿಕ ಮೂಲದ ಫೈನಾನ್ಸಿಯಲ್ ಪ್ಲಾನಿಂಗ್ ಸ್ಟಾಂಡರ್ಡ್ಸ್ ಬೋರ್ಡ್‌ನ ಭಾರತದ ಶಾಖೆ ನಡೆಸಿದ ಪರೀಕ್ಷೆಯಲ್ಲಿ ಕಳೆದ 12 ವರ್ಷಗಳಿಂದ ಈ ಕ್ಷೇತ್ರದಲ್ಲಿ ಅನುಭವವಿರುವ ಕಿರಣ್ ಉತ್ತೀರ್ಣರಾದರು. ಸಿಎಫ್‌ಪಿ ಮಾನ್ಯತೆ ಪಡೆದ ಉಡುಪಿ ಜಿಲ್ಲೆಯ ಮೊದಲಿಗರು ಇವರು.

ಮುಂದುವರೆದ ದೇಶಗಳಲ್ಲಿ ಆರ್ಥಿಕ ಯೋಜನೆ ಮತ್ತು ಹಣದ ಸಮರ್ಥ ನಿರ್ವಹಣಾ ಉಸ್ತುವಾರಿಯು ಅತೀ ಮುಖ್ಯ ಕ್ಷೇತ್ರವಾಗಿದೆ. ಹಾಗಾಗಿ ಹೂಡಿಕೆದಾರರು ತಮ್ಮ ಬಂಡವಾಳದ ಸುರಕ್ಷೆ ಹಾಗೂ ಅಭಿವೃದ್ಧಿಗೆ ನುರಿತ ಆರ್ಥಿಕ ಸಲಹೆಗಾರರನ್ನೇ ಆಯ್ಕೆ ಮಾಡುತ್ತಾರೆ.

ಈ ದಿಸೆಯಲ್ಲಿ ಈಗ ಕರಾವಳಿ ಕರ್ನಾಟಕದ ಅನುಭವಿ ಆರ್ಥಿಕ ಸಲಹೆಗಾರ ಕಿರಣ್‌ಕುಮಾರ್ ಎಂ. ಇವರು ಇದೇ ಜನವರಿ 5ರಂದು ಲೇಡಿಹಿಲ್ ಮಂಗಳೂರಿನಲ್ಲಿ (ಕುನರಾ ಮತ್ತು ಶಿರಡಿ ಸಾಯಿಬಾಬಾ ಮಂದಿರದ ಎದುರು) "INVEST N GROW" www.investngrow.in ಎಂಬ ಹೆಸರಿನಲ್ಲಿ ಹೊಸದಾಗಿ ಆರ್ಥಿಕ ಸಲಹಾ ಸಂಸ್ಥೆಯನ್ನು ಶುರುಮಾಡಿದ್ದಾರೆ. ಎಲ್ಲರೂ ಇದರ ಸದುಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

ಕಿರಣ್‌ಕುಮಾರ್ ಎಂ. (ಮೊಬೈಲ್ : 919342547676) ಇವರು ಬ್ರಹ್ಮಾವರ ಶ್ರೀಮತಿ ರಾಜೇಶ್ವರಿ ಹಾಗೂ ಅಶೋಕ್ ರಾವ್ ದಂಪತಿಗಳ ಪುತ್ರ ಹಾಗೂ ಅಂಬಲಪಾಡಿಯ ಶ್ರೀಮತಿ ಮಹಾಲಕ್ಷ್ಮಿ ಶಾನುಭಾಗ್ ಹಾಗೂ ಹೆಚ್.ಎನ್.ಶಾನುಭಾಗ ದಂಪತಿಗಳ ಅಳಿಯ.

## ಶ್ರೀ ಭಾರತೀ ಮಂಟಪದ ಉದ್ಘಾಟನೆ



ಪಡುಬಿದ್ರಿ ಶ್ರೀ ಬಾಲಗಣಪತಿ ಶ್ರೀ ಪ್ರಸನ್ನ ಪಾರ್ವತೀ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ "ಶ್ರೀ ಭಾರತೀ ಮಂಟಪ ಉದಯಾದ್ರಿ" ಎಂಬ ಸಭಾಂಗಣವನ್ನು ತಾ.23–12–2016ನೇ ಶುಕ್ರವಾರದಂದು ಕಾಪು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಲಾಲಾಜಿ ಮೆಂಡನ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಕರುಣ್‌ರಾವ್ ಬೆಳ್ಳೆ, ಶ್ರೀ ಪಿ.ಡಿ.ಶೇಖರ್ ರಾವ್, ಶ್ರೀ ಎಂ.ಕೆ. ದಿವಾಕರ್‌ರಾವ್ ಹಾಗೂ ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ಸದಸ್ಯರು, ಶ್ರೀ ಕ್ಷೇತ್ರದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.

ಈ ಪ್ರಯುಕ್ತ ಶ್ರೀಕ್ಷೇತ್ರದಲ್ಲಿ ತಾ.13–12–2016ರ ದತ್ತಪೂರ್ಣಿಮೆಯಿಂದ ತಾ.29–12–2016ನೇ ಎಳ್ಳಮವಾಸ್ಯೆಯ ತನಕ ಪ್ರತಿನಿತ್ಯ ರಂಗಪೂಜೆ ಸೇವೆ, ತಾ.27–12–2016ರಂದು ಎಡನೀರು ಮೇಳದವರಿಂದ ಯಕ್ಷಗಾನ ನೆರವೇರಿತು.

ವರ್ಷಪ್ರಂತಿಯಂತೆ ತಾ.29–12–2016ರ ಎಳ್ಳಮವಾಸ್ಯೆಯ ದಿನದಂದು ವರ್ಷಾವಧಿ ಉತ್ಸವವು ಜರಗಿತು. ಪರಿಸರದಲ್ಲಿ ಈ ಉತ್ಸವವನ್ನು ಎಳ್ಳಮಾವಾಸ್ಯೆ ಜಾತ್ರೆಯೆಂದೇ ಕರೆಯುತ್ತಾರೆ. ಈ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸುಮಾರು 1,000 ಜನರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಈ ಶ್ರೀಕ್ಷೇತ್ರದ ಭಕ್ತರಿಗೂ, ದಾನಿಗಳಿಗೂ, ಕಾರ್ಯಕರ್ತರೆಲ್ಲರಿಗೂ ಆಡಳಿತ ಮಂಡಳಿಯವರು ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ. ಶ್ರೀಭಾರತೀ ಮಂಟಪವು ಸಮಾಜ ಬಾಂಧವರ ಸಮಾರಂಭಗಳಿಗೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಮಿತದರದಲ್ಲಿ ಲಭ್ಯವಿದೆ.

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಿಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | – | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | – | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | – | 9343572490 |
| 4. | ನಂದಳಿಕೆ ಉಮೇಶ್ ರಾವ್ | – | 8970504176 |
| 5. | ಹೆರ್ಗ ನಿರಂಜನ ರಾವ್ | – | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | – | 9448252736 |
| 7. | ಮಹೇಶ್ | – | 7259914498 |
| 8. | ಟಿ.ಜಗದೀಶ ರಾವ್ | – | 9686123905 |
| 9. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | – | 9945379479 |
| 10. | ಅಜಿತ್ ರಾವ್ ಬೈಲೂರು | – | 9448108920 |
| 11. | ಆದ್ಯಪಾಡಿ ಮೋಹನದೇವ್ | – | 0820–2535328 |
| 12. | ವೈ. ಭುವನೇಂದ್ರ ರಾವ್ | – | 9448428330 |
| 13. | ಡಾ। ವೈ. ಸುದರ್ಶನ್ ರಾವ್ | – | 9845136322 |
| 14. | ಕುತ್ಪಾಡಿ ಸುರೇಶ್ ರಾವ್ | – | 9483242111 |
| 15. | ವೈ. ಪ್ರಕಾಶ್ ಕುಮಾರ್ | – | 9448445617 |
| 16. | ವೈ. ಪ್ರಸಾದ್ ಕುಮಾರ್ | – | 9036252105 |
| 17. | ಬಿ. ಜಯರಾಮ ರಾವ್ | – | 9844545040 |
| 18. | ಎಮ್.ಪಾಲಚಂದ್ರ ರಾವ್ | – | 0820–2521366 |
| 19. | ಕೆ. ವೆಂಕಟ್ ರಾವ್ | – | 9480016125 |
| 20. | ಎಸ್.ಎಮ್.ರಾವ್ | – | 9449914040 |
| 21. | ಐ.ಕೆ.ಜಯಚಂದ್ರ ರಾವ್ | – | 9448331683 |

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್, ಶ್ರೀ ಬಿ. ಜಯರಾಮ ರಾವ್**


**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

**ಮೊಬೈಲ್– 9886629697, 9986119865**



**SAMPATH KUMAR**

Mobile : 9741508881
8884873233

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

# ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ಮಹಾಗಣಪತಿ ವಾಕ್ಯಾರ್ಥ ವಿದ್ವತ್‌ಸಭೆ

–ಡಾ।ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ.

'ಅಭಿನವಶಂಕರ'ರೆಂದೇ ಪ್ರಸಿದ್ಧರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು (1879–1912) ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಮುವ್ವತ್ತಮೂರನೆಯವರು. ಗುರುಪರಂಪರಾ ಸ್ತೋತ್ರದಲ್ಲಿ ಉಕ್ತವಾದಂತೆ ವಿದ್ಯಾನಿಧಿಗಳೂ, ಮಂತ್ರನಿಧಿಗಳೂ, ಸದಾತ್ಮ ನಿಷ್ಠರೂ ಆದ ಅವರು ಮಾನವ ಶಂಭು ರೂಪರು (ವಿದ್ಯಾನಿಧೀನ್ ಮಂತ್ರನಿಧೀನ್ ಸದಾತ್ಮ ನಿಷ್ಠಾನ್ ಭಜೇ ಮಾನವಶಂಭು ರೂಪಾನ್) ಮೂರು ಬಾರಿ ದೇಶಾದ್ಯಂತ' ಧರ್ಮಯಾತ್ರೆ, ಅನೇಕ ತೀರ್ಥ ಕ್ಷೇತ್ರಗಳ ಪುನರುದ್ಧಾರ, ಮಾಧವೀಯ ಶಂಕರದಿಗ್ವಿಜಯದ ಆಧಾರದ ಮೇಲೆ ಭಗವತ್ಪಾದ ಶಂಕರರ ಜನ್ಮಭೂಮಿಯನ್ನು (ಕೇರಳದ ಕಾಲಟಿ) ಪತ್ತೆ ಹಚ್ಚಿ ಅಲ್ಲಿ ಶ್ರೀ ಶಂಕರ ಮಠವನ್ನು ನಿರ್ಮಿಸಿ, ಶ್ರೀ ಶಾರದಾಂಬಾ ಮತ್ತು ಶಂಕರಾಚಾರ್ಯ ವಿಗ್ರಹಗಳ ಪ್ರತಿಷ್ಠೆ, ಸದ್ವಿದ್ಯಾ ಸಂಜೀವಿನೀ ಪಾಠಶಾಲೆ, ಬೆಂಗಳೂರಿನ ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಭಿವರ್ಧಿನೀ ಪಾಠಶಾಲೆ–ಮೊದಲಾದ ಅನೇಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ನರಸಿಂಹವನ ನಿರ್ಮಾಣ, ಶ್ರೀ ಶಾರದಾಂಬಾ ದೇಗುಲದ ಪುನರುದ್ಧಾರ, ದೇಶದ ಅನೇಕ ಕಡೆಗಳಲ್ಲಿ ಶಂಕರಮಠಗಳ ಸ್ಥಾಪನೆ ಮತ್ತು ಶಂಕರ ಜಯಂತಿಯ ಆಚರಣೆ, ಆದಿಶಂಕರರ ಎಲ್ಲಾ ಕೃತಿಗಳ ಪ್ರಕಟಣೆ, ಆಶುಕವಿಗಳಾಗಿ ಅನೇಕ ಸ್ತೋತ್ರಗಳ ರಚನೆ–ಹೀಗೆ ಅವರು ಸನಾತನ ಧರ್ಮದ ಪುನರುದ್ಧಾರಕ್ಕಾಗಿ ಮಾಡಿದ ರಚನಾತ್ಮಕ ಕಾರ್ಯಗಳು ಅನೇಕ.

ಈ ಎಲ್ಲಾ ಶಾಶ್ವತ ಕಾರ್ಯಗಳ ಸಾಲಿನಲ್ಲಿ ಶ್ರೀಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆ ಒಂದು ವಿಶಿಷ್ಟ ಯೋಜನೆ. ತಮ್ಮ ಚಾತುರ್ಮಾಸ್ಯ ಅವಧಿಯಲ್ಲಿನ ಭಾದ್ರಪದ ಶುಕ್ಲ ಚತುರ್ಥಿ (ಗಣೇಶ ಚತುರ್ಥಿ)ಯಂದು ಶಾಸ್ತ್ರ ಪಂಡಿತರನ್ನೆಲ್ಲ ಒಂದೆಡೆ ಸೇರಿಸಿ ಸಭಾಗಣಪತಿಯ ದಿವ್ಯ ಸನ್ನಿಧಿಯಲ್ಲಿ ಈ ವಿದ್ವತ್ಸಭೆಯನ್ನು ಆರಂಭಿಸಿದ್ದರಿಂದ ಇದಕ್ಕೆ 'ಶ್ರೀ ಮಹಾಗಣಪತಿ ವಾಕ್ಯಾರ್ಥವಿದ್ವತ್ ಸಭಾ' ಎಂಬ ಹೆಸರು ಅನ್ವರ್ಥವಾದುದು. ಪ್ರತಿವರ್ಷ ಭಾದ್ರಪದ ಶುದ್ಧ ಚತುರ್ಥಿಯಿಂದ ಹುಣ್ಣಿಮೆಯವರೆಗೆ ನಡೆಯುವ ಈ ವಿದ್ವತ್ ಸಭೆಗೆ ರಾಷ್ಟ್ರೀಯ ಮಹತ್ತ್ವವಿದೆ. ದೇಶದ ಎಲ್ಲಾ ಭಾಗದ ಶಾಸ್ತ್ರ ಪಂಡಿತರು ಈ ವಿದ್ವತ್ಸಭೆಗೆ ಆಗಮಿಸುತ್ತಾರೆ. 'ಪದವಾಕ್ಯ ಪ್ರಮಾಣ ಪಾರಾವಾರಪಾರೀಣ' ಎಂಬ ಬಿರುದನ್ನು ಅನ್ವರ್ಥಗೊಳಿಸಿ ತಮ್ಮ ಅಸಾಧಾರಣ ಶಾಸ್ತ್ರಜ್ಞಾನದಿಂದ ಎಂಥವರನ್ನು ಬೆರಗುಗೊಳಿಸುವ ಪೂಜ್ಯ ಜಗದ್ಗುರುಗಳವರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀ ಶ್ರೀಗಳವರ ಸೂಕ್ಷ್ಮವಾದ ಮತ್ತು ಅಪಾರವಾದ ಶಾಸ್ತ್ರಜ್ಞಾನ ಪರಿಪೂರ್ಣವಾಗಿ ಪ್ರಕಟವಾಗಿ ಅದನ್ನು ಎಲ್ಲಾ ವಿದ್ವಾಂಸರೂ ಆಸ್ವಾದಿಸುವುದು ಈ ಸಭೆಯಲ್ಲಿ.

ಪ್ರತಿನಿತ್ಯ ಪೂರ್ವಾಹ್ನ ವೇದಾಂತ ಕುರಿತಾದ ವಾಕ್ಯಾರ್ಥ ನಡೆಯುತ್ತದೆ. ಮಧ್ಯಾಹ್ನ ನಂತರ ಜಗದ್ಗುರುಗಳವರ ಸಮ್ಮುಖದಲ್ಲಿ ಅತ್ಯಂತ ವಿಶದವಾಗಿ ಶಾಸ್ತ್ರಾರ್ಥ ವಿಷಯಕವಾದ ಚರ್ಚೆಗಳು ನಡೆಯುತ್ತವೆ. ತಮ್ಮ ಅಗಾಧಪಾಂಡಿತ್ಯದಿಂದ ಇಡೀ ದೇಶದಲ್ಲೇ ಪ್ರಸಿದ್ಧರಾದ ಶ್ರೀಶ್ರೀಭಾರತೀತೀರ್ಥ ಮಹಾಸ್ವಾಮಿಗಳವರು ಈ ಶಾಸ್ತ್ರಾರ್ಥ ಚಿಂತನೆಯ ಸಭೆಗೆ ಹೊಸ ಆಯಾಮ ನೀಡಿದ್ದಾರೆ. ಹಾಗಾಗಿ ಇಲ್ಲಿನ ಎಲ್ಲಾ ಗೋಷ್ಠಿಗಳೂ ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಉಪಯುಕ್ತವಾಗುತ್ತಿವೆ. ಉನ್ನತಮಟ್ಟದ ಈ ವಿದ್ವತ್ ಸಭೆಯಲ್ಲಿ ಭಾಗವಹಿಸುವುದೇ ತಮ್ಮ ಬದುಕಿನ ಭಾಗ್ಯ ಎಂದು ವಿದ್ವಾಂಸರು ಭಾವಿಸುತ್ತಾರೆ ಶೃಂಗೇರಿ ಶ್ರೀ ಶಾರದಾಪೀಠದ ವಿದ್ವತ್ಸಭೆಯಲ್ಲಿ ಭಾಗವಹಿಸಿ, ಜಗದ್ಗುರುಗಳವರ ಮೆಚ್ಚುಗೆ ಪಡೆದು ಒಬ್ಬ ವಿದ್ವಾಂಸ ಈ ದೇಶದ ಎಂತಹ ವಿದ್ವತ್ಸಭೆಯಲ್ಲೂ ಭಾಗವಹಿಸಿ ಜಯಶೀಲನಾಗಬಲ್ಲ ಎಂಬ ಭಾವನೆ ಇಂದು ಎಲ್ಲಾ ತರುಣ ವಿದ್ವಾಂಸರಲ್ಲೂ ಮೂಡಿದೆ. ಅಷ್ಟರ ಮಟ್ಟಿನ ಮಹತ್ತ್ವ ಸುಮಾರು ನೂರಿಪ್ಪತ್ತೈದು ವರ್ಷಕ್ಕೂ ಹೆಚ್ಚಿನ ಇತಿಹಾಸವುಳ್ಳ ಈ ಮಹಾಗಣಪತಿ ವಾಕ್ಯಾರ್ಥಸಭೆಗೆ ಇದೆ.

ಈ ಸಭೆಗೆ ಆಹ್ವಾನಿತರಾದ ಪ್ರತಿಯೊಬ್ಬ ಪಂಡಿತರೂ ತಾವು ಅಧ್ಯಯನ ಮಾಡಿದ ವ್ಯಾಕರಣ, ಮೀಮಾಂಸಾ, ವೇದಾಂತ ಅಥವಾ ನ್ಯಾಯಶಾಸ್ತ್ರಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಜಗದ್ಗುರುಗಳವರ ಆಶಯದಂತೆ ಸಭೆಯ ಮುಂದೆ ವಿಶದವಾಗಿ ಮಂಡಿಸುತ್ತಾರೆ. ಶ್ರೀಶ್ರೀಗಳವರು ಅವರನ್ನು ಪ್ರೋತ್ಸಾಹಿಸಿ, ಇತರ ವಿದ್ವಾಂಸರೂ ಆ ವಿಷಯವನ್ನು ತಿಳಿದುಕೊಳ್ಳಲು ಬೇಕಾದ ವಾತಾವರಣವನ್ನು ನಿರ್ಮಿಸುತ್ತಾರೆ. ವಾಕ್ಯಾರ್ಥ ಚರ್ಚೆಯ ಸಂದರ್ಭದಲ್ಲಿ ಯಾವುದಾದರೂ ಕ್ಲಿಷ್ಟವಾದ ಸಮಸ್ಯೆ ಮೂಡಿ, ವಿಷಯ ಅಸ್ಪಷ್ಟ ಅಥವಾ ಅನಿಶ್ಚಿತವಾಗಿ ಉಳಿದಾಗ ಅಧ್ಯಕ್ಷ ಸ್ಥಾನ ವಹಿಸಿರುವ ಜಗದ್ಗುರುಗಳವರು ಮಧ್ಯದಲ್ಲಿ ಪ್ರವೇಶಿಸಿ, ತಮ್ಮ ಅಸಾಧಾರಣವಾದ ಶಾಸ್ತ್ರಜ್ಞಾನದಿಂದ ಎಲ್ಲಾ ಪಂಡಿತರೂ ತಲೆದೂಗುವಂತೆ ಅದನ್ನು ಸೂಕ್ತ ರೀತಿಯಲ್ಲಿ ಪರಿಹರಿಸುತ್ತಾರೆ. ಶಾಸ್ತ್ರೋಕ್ತವಾದ ಈ ಸಮಸ್ಯಾಪನಯನ ಕೌಶಲ ಅನ್ಯತ್ರ ದುರ್ಲಭ.

ಈ ವಾಕ್ಯಾರ್ಥಸಭೆಯಲ್ಲಿ ಪೂಜ್ಯ ಗುರುವರೇಣ್ಯರು ಬೇರೆ–ಬೇರೆ ಶಾಸ್ತ್ರ–ಗ್ರಂಥಗಳ ಅನೇಕ ಸಾಲುಗಳನ್ನು ಉದ್ಧರಿಸುತ್ತಾರೆ. ಯಾವುದೇ ವಿಧವಾದ ಮಾನಸಿಕ ಒತ್ತಡಕ್ಕೆ ಸಿಲುಕದೆ, ಅನಾಯಾಸವಾಗಿ ಅವರು ಒಂದು ಗಹನವಾದ ವಿಷಯದ ಕುರಿತು ಲೀಲಾಜಾಲವಾಗಿ ತಮ್ಮ ವಾಗ್ಧಾರೆ ಹರಿಸುವಾಗ, ವಾಗ್ದೇವಿ ಶಾರದೆ ಅವರ ನಾಲಗೆಯ ತುದಿಯಲ್ಲಿ ನರ್ತಿಸುತ್ತಿದ್ದಾಳೋ ಎಂಬ ಭಾವನೆ ಉಂಟಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕ ವಿದ್ವಾಂಸರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಅವರೆಲ್ಲ ನಿಸ್ಸಂಕೋಚವಾಗಿ, ಯಾವುದೇ ವಿಧದ ಕೀಳರಿಮೆ ಇಲ್ಲದೆ ಭಾಗವಹಿಸುವಂತೆ ಶ್ರೀಶ್ರೀಗಳವರು ಪ್ರೇರೇಪಿಸುತ್ತಾರೆ. ಎಷ್ಟೋ ಬಾರಿ ಇದೇ ಮೊದಲ ಬಾರಿಗೆ ಬಂದ ತರುಣವಿದ್ವಾಂಸರು ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ದೇಶದ ಎಲ್ಲೆಡೆಗಳಿಂದ ಆಗಮಿಸಿದ ಹಿರಿಯ ವಿದ್ವಾಂಸರು ಯಾವುದೇ ಗೊಂದಲ ಕ್ಕೊಳಗಾಗದೆ ವಾಕ್ಯಾರ್ಥ ಚರ್ಚೆ ನಡೆಸುವುದನ್ನು ನೋಡಿ ಮೂಕವಿಸ್ಮಿತರಾಗುತ್ತಾರೆ. ಭಯಪಟ್ಟು ಮಾತನ್ನಾಡಲು ನಾಚುತ್ತಾರೆ. ಮುಖ ತಗ್ಗಿಸಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಾರೆ. ಪೂಜ್ಯ ಗುರುಗಳವರು ಇದನ್ನು ಗಮನಿಸಿ, ಶಾಸ್ತ್ರಕ್ಕೆ ಸಂಬಂಧಿಸಿದ ಸುಲಭವಾದ ಒಂದು ವಿಷಯವನ್ನು ಉಲ್ಲೇಖಿಸಿ, ಅದರ ಕುರಿತು ಅವರ ಅಭಿಪ್ರಾಯವನ್ನು ಹೇಳುವಂತೆ ಪ್ರೋತ್ಸಾಹಿಸುತ್ತಾರೆ. ಇದರಿಂದ ಉತ್ತೇಜಿತರಾದ ಆ ತರುಣ ಪಂಡಿತರು ಸ್ವಲ್ಪ ಸಾವರಿಸಿಕೊಂಡು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾರೆ. ಅವರ ಭೀತಿ–ಸಂಕೋಚಗಳೆಲ್ಲ ದೂರವಾಗಿ, ನಂತರ ಪ್ರತಿವರ್ಷವೂ ಈ ವಾಕ್ಯಾರ್ಥ ವಿದ್ವತ್ ಸಭೆಗೆ ಬರಲು ನಿರ್ಧರಿಸುತ್ತಾರೆ. ಜಗದ್ಗುರುಗಳವರ ಹಸನ್ಮುಖದಿಂದ ಅವರೆನ್ನು ಆಶೀರ್ವದಿಸುತ್ತಾರೆ.

ಜಗದ್ಗುರು ಮಹಾಸನ್ನಿಧಾನಂಗಳವರ ಕರಕಮಲಸಂಜಾತರೂ, ವಿದ್ಯಾವಿನಯ ಸಂಪನ್ನರೂ ಶಾಸ್ತ್ರನಿಷ್ಠರೂ ಆಗಿರುವ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಕಳೆದ ವರ್ಷದ (2015) ವಾಕ್ಯಾರ್ಥ ವಿದ್ವತ್ಸಭೆಯ ಮೊದಲದಿನ ನ್ಯಾಯಶಾಸ್ತ್ರದ 'ಸತ್ಪ್ರತಿ ಲಕ್ಷಣ' ಮತ್ತು ಮಧ್ಯದಲ್ಲೊಂದು ದಿನ (23–09–2015) ವೇದಾಂತಶಾಸ್ತ್ರದಲ್ಲಿ ಮಧುಸೂದನ ಸರಸ್ವತಿಗಳ 'ಅದ್ವೈತಸಿದ್ಧಿ' ಗ್ರಂಥವನ್ನಾಧರಿಸಿ ವಾಕ್ಯಾರ್ಥವನ್ನು ಮಾಡಿ ಜಗದ್ಗುರು ಮಹಾಸನ್ನಿಧಾನಂಗಳವರಿಗೂ ಮತ್ತು ನೆರೆದ ಎಲ್ಲಾ ವಿದ್ವಾಂಸರಿಗೂ ಆನಂದವನ್ನುಂಟು ಮಾಡಿದರು. ಮಾನವ ಶಂಭುರೂಪವಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರಿಂದ ಆರಂಭಗೊಂಡು ಇಲ್ಲಿಯವರೆಗೆ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದ ಈ ವಾಕ್ಯಾರ್ಥ ವಿದ್ವತ್ಸಭೆಯು ಮುಂದೆಯೂ ವಿಚ್ಛಿತ್ತಿ ಇಲ್ಲದೆ ನಡೆದುಕೊಂಡು ಬರುತ್ತದೆ ಎಂಬುದನ್ನು ಶಿಷ್ಯಸ್ವಾಮಿಗಳವರು ತಮ್ಮ ವಿದ್ವತ್ಪೂರ್ಣವಾದ ವಾಕ್ಯಾರ್ಥ ಮಂಡನೆಯ ಮೂಲಕ ದೃಢಪಡಿಸಿದರು.

ಶ್ರೀ ಮಠದ 'ಶಾಸ್ತ್ರಪೋಷಕಸಭಾ'ದ ಆಶ್ರಯದಲ್ಲಿ ನಡೆಸಲಾಗುವ ವಿದ್ವತ್ ಪರೀಕ್ಷೆಯಲ್ಲಿ ವಿಶಿಷ್ಟಸ್ಥಾನ ಪಡೆದ ಕೆಲವು ವಿದ್ಯಾರ್ಥಿಗಳನ್ನು ಸ್ವತಃ ಜಗದ್ಗುರುಗಳವರೇ ಪರೀಕ್ಷಿಸಿ, ಅದರಲ್ಲಿ ಜಯಗಳಿಸಿದವರಿಗೆ 'ವಿದ್ವತ್‌ಪ್ರವರ' ಎಂಬ ಬಿರುದು ನೀಡಿ ಗೌರವಿಸುತ್ತಾರೆ. ಶಾಸ್ತ್ರಾಧ್ಯಯನ ಮಾಡುವ ಅನೇಕ ವಿದ್ಯಾರ್ಥಿಗಳಿಗೆ ಶ್ರೀ ಮಠದಿಂದ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸಿ ವಿದ್ವತ್ಸಭೆಗೆ ಆಹ್ವಾನಿಸಲಾಗುತ್ತದೆ.

ಇತ್ತೀಚಿನ ವಾಕ್ಯಾರ್ಥಸಭೆಯೊಂದರ ಸಮಾರೋಪ ಸಮಾರಂಭದಲ್ಲಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಅನುಗ್ರಹ ಭಾಷಣ ಮಾಡಿ, 'ಏಕವ್ಯಕ್ತಿಯು ಅನೇಕ ಶಾಸ್ತ್ರಗಳನ್ನು ಅರಿಯುವುದು ಸುಲಭವಲ್ಲ. ಈ ವಿದ್ವತ್ ಸಭೆಯು ಅನೇಕ ಶಾಸ್ತ್ರಗಳ ಪರಿಚಯವನ್ನು ಪಡೆಯಲು ಉತ್ತಮ ವೇದಿಕೆಯಾಗಿದೆ. ಶಾಸ್ತ್ರನಿಷ್ಣಾತರಾದ ಅನೇಕ ವಿದ್ವಾಂಸರು ಇದರಲ್ಲೇ ಪಾಲ್ಗೊಂಡಿದ್ದಾರೆ ಅದರಲ್ಲೂ ಅನೇಕ ಯುವವಿದ್ವಾಂಸರು ಭಾಗವಹಿಸಿರುವುದು ನಮಗೆ ಅತ್ಯಂತ ಸಂತೋಷದಾಯಕವಾಗಿದೆ. ಮುಂದಿನ ದಿನಗಳಲ್ಲಿ ಹಿರಿಯ ವಿದ್ವಾಂಸರು ಕಿರಿಯ ವಿದ್ವಾಂಸರನ್ನು ಶಾಸ್ತ್ರಪಾಂಡಿತ್ಯಗಳಿಸುವಂತೆ ತರಬೇತುಗೊಳಿಸಬೇಕು'–ಎಂಬ ಕಿವಿಮಾತನ್ನು ಹೇಳಿದ್ದರು. ಕರ್ನಾಟಕ ರಾಜ್ಯಪಾಲರಾಗಿದ್ದ ಟಿ.ಎನ್.ಚತುರ್ವೇದಿಯವರು 2002ರ ವಾಕ್ಯಾರ್ಥ ಮಹಾಸಭೆಯ ಕೊನೆಯ ದಿನ ಅಭ್ಯಾಗತರಾಗಿ ಭಾಗವಹಿಸಿ ನಮ್ಮ ಸಾಂಸ್ಕೃತಿಕ ಸಂಪತ್ತು ಅಪಾರವಾದುದು ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಹೆಚ್ಚಿನ ಪ್ರಯತ್ನಗಳ ಅವಶ್ಯಕತೆ ಇದೆ. ಈ ದಿಶೆಯಲ್ಲಿ ಶೃಂಗೇರಿ ಶ್ರೀ ಶಾರದಪೀಠ ಉತ್ತಮ ಕೆಲಸವನ್ನು ಮಾಡುತ್ತಿದೆ, ಕೆಲವರು ಸಂಸ್ಕೃತವು ಮೃತಭಾಷೆಯೆಂದು ಹೇಳುತ್ತಾರೆ. ಆದರೆ ಇಲ್ಲಿ ನಡೆಯುವ ಈ ಸದಸ್ಯನನ್ನು ನೋಡಿದರೆ ಸಂಸ್ಕೃತ ಜೀವಿತಭಾಷೆ ಎನ್ನುವುದು ಅವರಿಗೆ ತಿಳಿಸುತ್ತದೆ' –ಎಂದು ಅಭಿಪ್ರಾಯಪಟ್ಟಿದ್ದರು.

ಇತ್ತೀಚಿನ ವರ್ಷಗಳಲ್ಲಿ ಶ್ರೀಮಠದ 'ಶಾಸ್ತ್ರಸಂವರ್ಧಿನೀಸಭಾ'ದ ಆಶ್ರಯದಲ್ಲಿ ನಡೆಯುತ್ತಿರುವ ಈ ವಿದ್ವತ್ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ವಾಂಸರಿಗೂ ಗೌರವಧನ ನೀಡುವುದರ ಜೊತೆಗೆ ನ್ಯಾಯ ವ್ಯಾಕರಣ, ಮೀಮಾಂಸಾ, ವೇದಾಂತ ಮತ್ತು ತರ್ಕಶಾಸ್ತ್ರಗಳಲ್ಲಿ ಆಯ್ದ ವಿದ್ವಾಂಸರಿಗೆ ಪಾರಿತೋಷಕ ನೀಡಲಾಗುತ್ತದೆ. ಇತ್ತೀಚಿನ ಕೆಲವು ವರ್ಷಗಳಿಂದ ವ್ಯಾಕರಣ ಮೀಮಾಂಸಾ, ವೇದಾಂತ ಮತ್ತು ತರ್ಕಶಾಸ್ತ್ರಗಳಲ್ಲಿ ಆಯ್ದ ನಾಲ್ಕು ಮಂದಿ ವಿದ್ವಾಂಸರಿಗೆ ಜಗದ್ಗುರುಗಳವರ ಸಮ್ಮುಖದಲ್ಲಿ ಬಂಗಾರದ ಉಂಗುರವನ್ನು ನೀಡಿ ಗೌರವಿಸಲಾಗುತ್ತಿದೆ. ಶ್ರೀಮಠದ ಆಡಳಿತಾಧಿಕಾರಿಗಳಾದ ಗುರುಸೇವಾಧುರೀಣ, ಪದ್ಮಶ್ರೀ ಪುರಸ್ಕೃತ ಡಾ। ವಿ.ಆರ್.ಗೌರೀಶಂಕರ್ ಅವರು 2015ರಿಂದ ತಮ್ಮ ತಂದೆ 'ವಿದ್ಯಾನಿಧಿ' ಪಿ.ಎಸ್. ರಾಮಚಂದ್ರ ಶಾಸ್ತ್ರಿಗಳವರ ಸ್ಮರಣಾರ್ಥವಾಗಿ 'ವಿದ್ಯಾನಿಧಿ' ಎಂಬ ಹೆಸರಿನಲ್ಲಿ ನಾಲ್ಕು ಮಂದಿ ಹಿರಿಯ ಪಂಡಿತರು ಮತ್ತು ನಾಲ್ಕು ತರುಣವಿದ್ವಾಂಸರಿಗೆ ಗಮನಾರ್ಹವಾದ ಮೊತ್ತದ ನಗದು ಪುರಸ್ಕಾರವನ್ನು ನೀಡಿ ಸನ್ಮಾನಿಸುತ್ತಿದ್ದಾರೆ.

'ಶ್ರೀ ಶಂಕರ ಅದ್ವೈತ ಶೋಧ ಕೇಂದ್ರ'ದ ಆಶ್ರಯದಲ್ಲಿ ಈ ವಿದ್ವತ್ಸಭೆಯ ಕಲಾಪಗಳನ್ನೆಲ್ಲ ಪುಸ್ತಕರೂಪದಲ್ಲಿ ಅಚ್ಚು ಹಾಕಿಸಿ, ಎಲ್ಲಾ ವಿದ್ವಾಂಸರಿಗೆ ನೀಡಲಾಗುತ್ತಿದೆ. ಅನೇಕ ಸಂಸ್ಕೃತ ಸಂಶೋಧನ ಗ್ರಂಥಗಳನ್ನು ಈ ವಿದ್ವತ್ ಸಭೆಯಲ್ಲಿ ಅನಾವರಣಗೊಳಿಸಲಾಗುತ್ತದೆ. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ವಾಂಸರಿಗೂ ಅವರ ಅನುಷ್ಠಾನಾದಿಗಳಿಗೆ ತೊಂದರೆಯಾಗದಂತೆ ಉತ್ತಮ ವಸತಿ ಸೌಕರ್ಯ, ಪ್ರತ್ಯೇಕ ಭೋಜನ ವ್ಯವಸ್ಥೆ–ಇತ್ಯಾದಿಗಳನ್ನು ಏರ್ಪಡಿಸಿ, ಪ್ರಯಾಣ ವೆಚ್ಚ ನೀಡಿ, ಆತ್ಮೀಯತೆಯಿಂದ ಬೀಳ್ಕೊಡಲಾಗುತ್ತದೆ.

ಹೀಗೆ ಶೃಂಗೇರಿ ಶ್ರೀಶಾರದಾಪೀಠದ ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆಯು ಇಡೀ ದೇಶಕ್ಕೆ ಒಂದು ಮಾದರಿ ನಮ್ಮ ದೇಶದ ಸಂಸ್ಕೃತ ವಿಶ್ವ ವಿದ್ಯಾಲಯಗಳು ರಾಷ್ಟ್ರಮಟ್ಟದ ಅನೇಕ ಸಂಸ್ಕೃತ ಸಂಸ್ಥೆಗಳು ಮತ್ತು ಇತರ ಸಂಸ್ಕೃತ ಪರ ಸಂಘಟನೆಗಳಿಂದ ನಡೆಸಲಾಗದ ಇಂತಹ ಒಂದು ಅಮೋಘ ವಿದ್ವತ್ಸಭೆಯನ್ನು ಅದು ಆರಂಭವಾದಂದಿನಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿರುವುದು ಸಂಸ್ಕೃತಾಭಿಮಾನಿಗಳೆಲ್ಲರೂ ಹೆಮ್ಮೆಪಡಬೇಕಾದ ವಿಷಯ.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 14-01-2017 | ಮಕರ ಸಂಕ್ರಮಣ |
| 15-01-2017 | ಸಂಕಷ್ಟಹರ ಚತುರ್ಥಿ |
| | ಉಡುಪಿ ಚೂರ್ಣೋತ್ಸವ |
| 23-01-2017 | ಸರ್ವೈಕಾದಶಿ |
| 27-01-2017 | ಅಮಾವಾಸ್ಯೆ |
| 07-02-2017 | ಸರ್ವೈಕಾದಶಿ |
| 10-02-2017 | ಹುಣ್ಣಿಮೆ |
| 12-02-2017 | ಕುಂಭ ಸಂಕ್ರಮಣ |
| 14-02-2017 | ಸಂಕಷ್ಟಹರ ಚತುರ್ಥಿ |



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


# ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಮತ್ತು ಗ್ರಂಥ ಸುಭಾಷಿತ

- ವೈ. ಮೋಹನ ರಾವ್

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಚೇತನಗಳಿಗೆ ಹಾಗೂ ಭಾರತಾಂಬೆ ಮತ್ತು ಕನ್ನಡಾಂಬೆ ಭುವನೇಶ್ವರಿಯ ಪಾದ ಕಮಲಗಳಲ್ಲಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹಾಗೂ ದೇಶಭಕ್ತ ತನ್ನ ತಂದೆಯವರಾದ ದಿ| ನಂದಳಿಕೆ ರಾಮರಾವ್, ವಿ.ಎಸ್. ಇವರ ಚರಣಾರವಿಂದಕ್ಕೆ ಲೇಖಕರಾದ ಎನ್.ಪದ್ಮನಾಭ ರಾವ್ ಪುಸ್ತಕವನ್ನು ಅರ್ಪಿಸಿದ್ದಾರೆ.

''ನಾನು ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ 1997ರಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ ಪ್ರದರ್ಶನದ ಮಳಿಗೆಯನ್ನು ಏರ್ಪಡಿಸಿತ್ತು.... ಇದರ ಮುಖ್ಯ ಉದ್ದೇಶವೇನೆಂದರೆ ಸಾರ್ವಜನಿಕರಿಗೆ ನಮ್ಮ ದೇಶವು ಸ್ವಾತಂತ್ರ್ಯ ಪಡೆಯಲು ಹಾಗೂ ಬ್ರಿಟಿಷ್ ದುರಾಡಳಿತದಿಂದ ಬಿಡುಗಡೆಗೊಳ್ಳಲು ಯಾವ ರೀತಿಯಲ್ಲಿ ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು, ಏನೆಲ್ಲಾ ತ್ಯಾಗ-ಬಲಿದಾನ ಮಾಡಿದರು ಹಾಗೂ ತಮ್ಮ ಸೇವೆಯನ್ನು ಮುಡಿಪಾಗಿಟ್ಟು ಹೋರಾಡಿದರು ಎಂಬ ಬಗ್ಗೆ ಈಗಿನ ಯುವ ಜನರಿಗೆ ತಿಳಿಯಲು, ನಮ್ಮ ಹಿರಿಯರು ಯಾವ ರೀತಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬ ಕುರಿತು ತಿಳಿಯಲು ಸದರಿ ಪ್ರದರ್ಶನವನ್ನು ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಎಲ್ಲಾ ರೀತಿಯ ಮಾಹಿತಿ ಗಳನ್ನು ಪ್ರದರ್ಶಿಸಲಾಗಿತ್ತು. ಇದರಿಂದ ಸ್ವಲ್ಪಮಟ್ಟಿಗಾದರೂ ಈಗಿನ ಯುವ ಜನತೆ ಎಚ್ಚೆತ್ತು ನಮ್ಮ ಪೂರ್ವಜರು ಕಷ್ಟಪಟ್ಟು ಪಡೆದ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಬೇಕೆಂಬ ವಿವೇಚನೆ ಮೂಡಿಬರಲಿ ಎಂಬ ಸದುದ್ದೇಶದಿಂದ ಸದರಿ ಪ್ರದರ್ಶನವನ್ನು ಆಕರ್ಷಕ ಹಾಗೂ ವಿಶಿಷ್ಟ ರೀತಿಯಲ್ಲಿ ಏರ್ಪಡಿಸಲಾಗಿತ್ತು. ಈಗ ಇದನ್ನು ಗ್ರಂಥ ಮೂಲಕ ಪ್ರಕಟಿಸಿ ಸಾರ್ವಜನಿಕ ಓದುಗರಿಗೆ ತಲುಪಿಸಬೇಕೆಂಬ ಹಂಬಲದಿಂದ ಈ ಚೊಚ್ಚಲ ಪ್ರಯತ್ನ ಮಾಡಲಾಗಿದೆ'' ಎಂಬುದು ಎನ್.ಪದ್ಮನಾಭ ರಾವ್, ಸಂಪಾದಕರು, ಮುಖ್ಯಗ್ರಂಥಾಲಯಾಧಿಕಾರಿ (ನಿವೃತ್ತ) ಇವರ 'ಮೊದಲಮಾತು' ಈ ಗ್ರಂಥದಲ್ಲಿದೆ.

''ಪುಟ್ಟಹಕ್ಕಿಗೂ ಸ್ವಾತಂತ್ರ್ಯ ಬೇಕೆಂಬುದಾದರೆ, ನಮಗೇಕೆ ಬೇಡ? ಬನ್ನಿ, ಈಗ ನಾವು ಬ್ರಿಟಿಷರ ಬಂಧನದಿಂದ ಬಿಡಿಸಿಕೊಂಡು ಆ ಆನಂದಮಯ ಸ್ವಾತಂತ್ರ್ಯವನ್ನು ಪಡೆಯೋಣ. ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು-ಹೀಗೆ ದೊಡ್ಡ ಕೂಗು ಹಾಕಿ ಸುಪ್ತಾವಸ್ಥೆಯಲ್ಲಿದ್ದ ಭಾರತದಲ್ಲಿ ಜಾಗೃತಿ ಉಂಟು ಮಾಡಿದವರೇ 'ಮಹಾತ್ಮ'ರೆನಿಸಿಕೊಂಡ 'ಮೋಹನ ದಾಸ ಕರಮಚಂದ ಗಾಂಧಿ'. ಇವರ ಆ ಕೂಗು ಅಂದಿನ ಭಾರತೀಯರಲ್ಲಿ ದೇಶಪ್ರೇಮದ ಅರಿವು ಮೂಡಿಸಿದಂತೆ ಸ್ವಾತಂತ್ರ್ಯದ ಮಹತ್ವವನ್ನೂ ತಿಳಿಹೇಳಿತು. ಹನಿತುಂಬಿದ ಹಳ್ಳದಂತೆ, ತೆನೆಗೂಡಿದ ಭತ್ತದಂತೆ ಜನರು ಗಾಂಧೀಜಿಯವರ ಜತೆಗೂಡಿದರು. ಗಾಂಧೀಜಿಯವರು ಹಾಕಿಕೊಟ್ಟ ಹಾದಿಯಲ್ಲಿ ಸಾಗುತ್ತಾ ಸ್ವಾತಂತ್ರ್ಯ ಸಮರದಲ್ಲಿ ಒಂದಾಗಿ ಸೇರಿ ಹೋರಾಡಿದರು'' ಎಂದು 'ಮುನ್ನುಡಿ'ಯಲ್ಲಿ ಕನ್ನಡ ಕಾದಂಬರಿಗಾರ್ತಿ ಎಸ್.ಮಂಗಳಾಸತ್ಯಂ ಇವರು ಹೇಳುತ್ತಾರೆ.




ಕೃತಿ : 'ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಮತ್ತು ಗ್ರಂಥ ಸುಭಾಷಿತ', ಲೇಖಕರು : ಎನ್.ಪದ್ಮನಾಭ ರಾವ್ ಪ್ರಕಾಶಕರು : ಗೀತಾಂಜಲಿ ಪಬ್ಲಿಕೇಶನ್, ನಾಗರಬಾವಿ, ಬೆಂಗಳೂರು ಬೆಲೆ : ರೂ.180/-

ಡಾ| ಆರ್.ಶಿವಣ್ಣ, ಅಧ್ಯಕ್ಷರು, ಬಸವತತ್ವ ಪ್ರಚಾರ ಕೇಂದ್ರ 'ಚೆನ್ನುಡಿ'ಯಲ್ಲಿ ಹೀಗೆ ಹೇಳುತ್ತಾರೆ- ''ಶ್ರೀಯುತರದು ಸೀದಾಸಾದಾ ಬದುಕು. ವೇಷಭೂಷಣ ಇರಲಿ, ಊಟ ತಿಂಡಿ ಇರಲಿ, ನಡೆನುಡಿ ಇರಲಿ ಯಾವುದರಲ್ಲೂ ಆಡಂಬರ ಕಾಣುವುದಿಲ್ಲ. ಪಾಲಿಗೆ ಬಂದದ್ದು ಪಂಚಾಮೃತ ಎಂಬ ಭಾವನೆಯಿಂದಲೇ ಬದುಕನ್ನು ನಡೆಸಿಕೊಂಡು ಬಂದವರು. ಶ್ರೀಯುತರಿಗೆ ಪ್ರತಿಭೆ ಇದೆ, ಅಭ್ಯಾಸ ಇದೆ, ಕ್ರಿಯಾಶೀಲತೆ ಇದೆ, ಬರಹಗಾರರ ಬಳಗ ಇದೆ. ಇಲ್ಲದಿರುವುದು ಅಪಾರ ಆಸ್ತಿ-ಪಾಸ್ತಿ-ಸಂಪತ್ತು ಮಾತ್ರ. ಅದಕ್ಕೆ ಅವರು ಚಿಂತೆ ಮಾಡಿದವರೂ ಅಲ್ಲ''.

ಪ್ರಮುಖ ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಸುಮಾರು 35 ಜನ ಮತ್ತು ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು ಸುಮಾರು 25 ಜನ. ಇವರ ಭಾವಚಿತ್ರ ಮತ್ತು ಇವರ ಮುಖ್ಯ ಜೀವನ ಸಂದೇಶಗಳು, ಸಾಧನೆಗಳು ಈ ಕೃತಿಯಲ್ಲಿ ಪ್ರಕಟವಾಗಿವೆ. 'ಗ್ರಂಥ-ಗ್ರಂಥಾಲಯ ಸುಭಾಷಿತಗಳು' ಸುಮಾರು 58 ಈ ಪುಸ್ತಕದಲ್ಲಿ ಪ್ರಕಟವಾಗಿವೆ. ಉದಾ: ಗತಕಾಲದ ಆತ್ಮ ಪುಸ್ತಕಗಳಲ್ಲಿದೆ, ಪುಸ್ತಕಗಳು ಮನುಷ್ಯ ಬರಲಿರುವ ಪೀಳಿಗೆಯವರಿಗೆ ಕೊಡುವ ಕಾಣಿಕೆ, ಬಿಡುವ ಆಸ್ತಿ ಇತ್ಯಾದಿ.

ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯಗಳ ವಿವರ ಇದೆ. ಹೀಗೆ ಆಕರ್ಷಕವಾಗಿ ಈ ಎಲ್ಲಾ ವಿಷಯಗಳು ಈ ಕೃತಿಯಲ್ಲಿ ಮೂಡಿಬಂದಿವೆ. ಪ್ರಸ್ತುತ ಸಂದರ್ಭದಲ್ಲಿ ದೇಶಭಕ್ತರು ಮತ್ತು ಸ್ವಾತಂತ್ರ್ಯ ಅಭಿಮಾನಿಗಳು ಮೆಚ್ಚಲೇಬೇಕಾದ ಕೃತಿ ಇದು.

# ಕರ್ತವ್ಯ-ಮಾನವೀಯತೆ-ಆತ್ಮೀಯತೆ

(ನನ್ನ ನೆನಪಿನಂಗಳದಿಂದ-ಜಿ.ಕೆ.ಕೊಳ್ಪೆ)

ಸುಮಾರು ನಾಲ್ಕು ದಶಕಗಳ ನನ್ನ ಬ್ಯಾಂಕ್ ಉದ್ಯೋಗದಲ್ಲಿ ಕರ್ತವ್ಯದೊಂದಿಗೆ ಮಾನವೀಯತೆ ತೋರಿ ಆತ್ಮೀಯತೆ ಪಡೆದು ಸಾರ್ಥಕತೆ ಹೊಂದಿದ್ದೇನೆ.

ಸನ್ 1993ರಲ್ಲಿ ನಾನು ಕಾರವಾರ ಶಾಖೆಯಲ್ಲಿರುವಾಗ ನಡೆದ ಈ ಘಟನೆಯು ನನ್ನ ನೆನಪಿನಂಗಳದಲ್ಲೊಂದು. ಪಕ್ಕದ ಮನೆಯ ನಿವೃತ್ತ ಅಧ್ಯಾಪಕರೋರ್ವರು ಹಿಂದಿನ ಮ್ಯಾನೇಜರರ ಸ್ನೇಹಿತರರಾಗಿದ್ದು "ಶೇರು ವ್ಯವಹಾರ"ದಲ್ಲಿ ಅವರೊಂದಿಗೆ ಕೈ ಜೋಡಿಸಿ ಬ್ಯಾಂಕಿಗೆ ಸಂಬಂಧಿಸಿದ ದೂರವಾಣಿಯನ್ನು ಸಾಕಷ್ಟು ಉಪಯೋಗಿಸುತ್ತಿದ್ದರು. ನಾನು ಬಂದನಂತರ ಅದನ್ನು ನಿರ್ಬಂಧಿಸಿದೆ. ಸ್ವಲ್ಪ ಬೇಸರಿಸಿದರೂ, ಮುಂದಕ್ಕೆ ನನ್ನ ಮಾನವೀಯ ನೆಲೆಯ ಸಹಕಾರದಿಂದ, ಆ ಕುಟುಂಬ ನಾವು ಕಾರವಾರ ಬಿಡುವ ತನಕ ಆತ್ಮೀಯರಾಗಿದ್ದುದು ನನ್ನ ನೆನಪಲ್ಲಿ ಇನ್ನೂ ಇದೆ. ಅದೊಂದು ದಿನ ಬೆಳಗ್ಗೆ ಸುಮಾರು 5 ಗಂಟೆಗೆ ಆ ಮನೆಯಿಂದ ಅಳು ಕೇಳಿಸುತ್ತಿತ್ತು. ಕೂಡಲೇ ನಾನೂ-ನನ್ನವಳು ಆ ಮನೆಗೆ ಹೋದೆವು. ಆ ಅಧ್ಯಾಪಕರ ವೃದ್ಧ ತಂದೆಯವರು ದೈವಾಧೀನರಾಗಿದ್ದರು. ಅವರ ಹಳ್ಳಿ ಮನೆ ಸುಮಾರು ನಾಲ್ಕು ಕಿ.ಮೀ ದೂರವಿದ್ದು, ಅಲ್ಲಿಗೆ ಮೃತದೇಹವನ್ನು ಸಾಗಿಸಬೇಕಿತ್ತು. ಅವರು ಬಹಳಷ್ಟು ಕಡೆ ವಾಹನಕ್ಕಾಗಿ ಪ್ರಯತ್ನಿಸಿ ವಿಫಲರಾಗಿದ್ದರು. ಹತ್ತಿರದ ಸಂಬಂಧಿಕರು ಕೂಡಲೇ ಯಾರೂ ಬರಲಿಲ್ಲ. ಅವರ ಅಸಹಾಯಕತೆ ನೋಡಿ ನನ್ನ ಕಾರಿನಲ್ಲಿ ಸಾಗಿಸುವ ಭರವಸೆ ಕೊಟ್ಟೆ. ಮೃತ ದೇಹವನ್ನು ಕಾರಿನಲ್ಲಿಡಲು ಸಹಕರಿಸಿ ಅವರ ಹಳ್ಳಿಗೆ ತಲಪಿಸಿದೆ. ಅಲ್ಲಿ ಕೂಡಾ ಅವರೊಂದಿಗೆ "ದೇಹವನ್ನು" ಹೊತ್ತು ಮನೆಯ ಚಾವಡಿಯಲ್ಲಿ ಮಲಗಿಸಿ, ಸಾಂತ್ವನ ಹೇಳಿ ಹಿಂದಿರುಗಿದೆ. ನನ್ನ ಈ ಕಿಂಚಿತ್ ಮಾನವೀಯ ಸೇವೆ, ಆ ಊರಲ್ಲಿ ಸಾಕಷ್ಟು ಪ್ರಚಾರ ಪಡೆಯಿತು. ಮುಂದಕ್ಕೆ ಆ ಕುಟುಂಬ ನಮಗೆ ಬಹಳ ಆತ್ಮೀಯವಾಯಿತು. ಅವರ ತಂದೆ-ತಾಯಿಯವರ ಹಳೇ ಭಾವಚಿತ್ರವನ್ನು ನನ್ನ ಮಗನಿಗೆ ಕೊಟ್ಟು, ಅದನ್ನು ದೊಡ್ಡದಾಗಿ ಬಣ್ಣಹಚ್ಚಿ ಬಿಡಿಸಿಕೊಡುವರೆ ಕೇಳಿಕೊಂಡರು. (ನನ್ನ ಮಗ, ಸುಂದರ ಚಿತ್ರ ಬಿಡಿಸಿ ಬಣ್ಣ ಹಚ್ಚುವುದರಲ್ಲಿ ನಿಪುಣನಾಗಿದ್ದು ವಿಷಯ ಅವರಿಗೆ ತಿಳಿದಿತ್ತು) ಕೆಲವು ದಿನಗಳಲ್ಲೇ ಅವನು ಬಿಡಿಸಿದ ಬಣ್ಣದ ಚಿತ್ರ (ಭಾವಚಿತ್ರ) ನೋಡಿ ಬಹಳ ಸಂತೋಷಪಟ್ಟು, ಸಂಭಾವನೆ ಕೊಡಲು ಮುಂದಾದಾಗ ನನ್ನ ಮಗ ಸ್ವೀಕರಿಸದೆ, "ನೀವೊಬ್ಬ ಉಪಾಧ್ಯಾಯರು, ನಿಮ್ಮ ಆಶೀರ್ವಾದ-ಪ್ರೋತ್ಸಾಹ ನನಗಿರಲಿ" ಎಂದ.

ಆ ನಂತರದ ದಿನಗಳಲ್ಲಿ ಆ ಊರಲ್ಲಿ ನಡೆದ "ಮಿಸ್ ಕಾರವಾರ' ಸ್ಪರ್ಧೆಗೆ ನನ್ನ ಮಗಳು ಅವರ ಮಗಳನ್ನು ಪ್ರೋತ್ಸಾಹಿಸಿ, ಅಲಂಕಾರ ಮಾಡಿ, ನಡಿಗೆ ಕ್ರಮ (CAT WALK) ಕಲಿಸಿ, ಆ ಹುಡುಗಿ "ಮಿಸ್ ಕಾರವಾರ"ಳಾಗಿ ವಿಜೇತಳಾದದ್ದು ನಮಗೆಲ್ಲರಿಗೂ ಸಂಭ್ರಮ ತಂದಿತು. ಸ್ವಲ್ಪ ಸಮಯದಲ್ಲಿ ನನ್ನ ವರ್ಗಾವಣೆಯಾಗಿ ನಾವೆಲ್ಲ ಹೊರಡುವಾಗ ನಮ್ಮನ್ನು ಬಹಳ ಆತ್ಮೀಯತೆಯಿಂದ ಆ ಅಧ್ಯಾಪಕ ಕುಟುಂಬದವರು ಬೀಳ್ಕೊಟ್ಟರು.

# ಕಿರುಷಷ್ಠಿ ಸಮಾರಾಧನೆ

ತಾ.04-01-2017ರ ಬುಧವಾರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕಾಂತಮಂಗಲ (ಅಜ್ಜಾವರ ಗ್ರಾಮ, ಸುಳ್ಯ ತಾಲೂಕು)ದಲ್ಲಿ ಕಿರುಷಷ್ಠಿಯ ಪ್ರಯುಕ್ತ ಕಿರುಷಷ್ಠಿ ಸಮಾರಾಧನೆಯನ್ನು ಅಶ್ಲೇಷಾ ಬಲಿ ಸೇವೆಯೊಂದಿಗೆ ಆಚರಿಸಲಾಯಿತು. ಪ್ರಾತಃಕಾಲ 8 ಗಂಟೆಗೆ ಆರಂಭವಾದ ಗಣಪತಿ ಹೋಮ ಹಾಗೂ ಸುಬ್ರಹ್ಮಣ್ಯ ಹೋಮದ ನಂತರ ಧಾರ್ಮಿಕ ಸಭೆ ನಡೆಯಿತು. ದೇವಳದ ಅನುವಂಶಿಕ ಮೊಕ್ತೇಸರರಾದ ಶ್ರೀ ಎ.ಶಿವರಾವ್ ಇವರು ಸಭೆಯ ಅಧ್ಯಕ್ಷರಾಗಿದ್ದರು. ಸುಳ್ಯದ ಶ್ರೀ ಚೆನ್ನಕೇಶವ ದೇವಸ್ಥಾನದ ಅನುವಂಶಿಕ ಮೊಕ್ತೇಸರರಾದ ಡಾ| ಹರಪ್ರಸಾದರವರು ಪ್ರಮುಖ ಅಭ್ಯಾಗತರಾಗಿದ್ದರು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಆಶೀರ್ವಚನ ನೀಡಿದರು. ಅನ್ನ ಸಂತರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

# ಶ್ರೀ ಭಗವದ್ಗೀತಾ ಅಭಿಯಾನ-ಕರ್ನಾಟಕ

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀಮದ್‌ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಪೀಠಾರೋಹಣದ ರಜತ ಮಹೋತ್ಸವ ವರ್ಷ 2016-17 ಅಂಗವಾಗಿ 'ಸಪ್ತಾಹ ಗೀತಾಜಯಂತಿ'ಯನ್ನು ತಾ.4-12-2016ರಿಂದ ತಾ.11-12-2016ರ ತನಕ "ಗೀತಾಪಠಣ ಯಜ್ಞ"ದೊಂದಿಗೆ ಕರ್ನಾಟಕದಾದ್ಯಂತ ಆಚರಿಸಲಾಯಿತು. ಉಡುಪಿ ಜಿಲ್ಲೆಯಲ್ಲೂ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದು, ತಾ.11-12-2016ರಂದು ಸಂಜೆ ಶ್ರೀ ಕೃಷ್ಣ ಮಠದ "ಗೀತಾಮಂದಿರ"ದಲ್ಲಿ ಸಮಾರೋಪ ಸಮಾರಂಭ ನಡೆಯಿತು. ಶ್ರೀ ಪೇಜಾವರ ಮಠದ ಹಿರಿ-ಕಿರಿಯ ಹಾಗೂ ಶ್ರೀ ಪುತ್ತಿಗೆಮಠದ ಯತೀವರೇಣ್ಯರುಗಳು ಸಾನ್ನಿಧ್ಯ ವಹಿಸಿ, ಭಗವದ್ಗೀತೆಯ ಕೆಲವು ಶ್ಲೋಕಗಳನ್ನು ಉಲ್ಲೇಖಿಸಿ, ಜೀವನ ಸಾರ್ಥಕ್ಯದ ಬಗ್ಗೆ ಬೆಳಕು ಚೆಲ್ಲಿ, ಸಪ್ತಾಹದಲ್ಲಿ ಭಾಗವಹಿಸಿದ ಸಮಸ್ತರನ್ನು ಆಶೀರ್ವದಿಸುತ್ತಾ 'ಅನುಗ್ರಹ ಭಾಷಣ' ಮಾಡಿದರು. ನಮ್ಮ ಸ್ಥಾನಿಕ ಸಮಾಜದ ಬೈಲಕೆರೆ ನಿವಾಸಿಗಳು ಈ ಸಪ್ತಾಹದಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮ ಯಶಸ್ಸುಗೊಳಿಸಲು ಸಹಕರಿಸಿದ ಶ್ರೀ ಜಿ.ಕೆ ಕೊಳ್ಪೆ ಮತ್ತು ಶ್ರೀ ಮಂಜುನಾಥ ಹೆಬ್ಬಾರ್‌ರನ್ನು ಸಂಘಟಕರು ಪ್ರಶಂಸಿದರು.


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

*With Best Complimemts From*

SRI M. SHAILESH RAO
B.E., Civil

Ph : 9448624324

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ತಾ.14-02-2017 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.25-01-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.17-01-2017 ಮತ್ತು ತಾ.01-02-2017 ಮತ್ತು ತಾ.15-02-2017 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಂ

**ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ ಶೃಂಗೇರಿ**

**ದೂರವಾಣಿ : 08265-250123, 250192** www.sringeri.net/ashtottara-yajna

### ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರು ಹಾಗೂ ಅವರ ಕರಕಮಲ ಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಮಹಾ ಸಂರಕ್ಷಣೆಯಲ್ಲಿ ಶ್ರೀ ಮಠದ ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನವು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ. ಪ್ರಸ್ತುತ ಈ ಅಭಿಯಾನದಲ್ಲಿ ಉಭಯ ಜಗದ್ಗುರುಗಳ ಪರಮಾನುಗ್ರಹದೊಂದಿಗೆ **ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ** ಎಂಬ ಯೋಜನೆಯನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ ಪರಮಶಿವಾವತಾರರಾದ ಆದಿಶಂಕರರ ಅಷ್ಟೋತ್ತರ ಶತನಾಮಗಳನ್ನು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಸಾಮೂಹಿಕವಾಗಿ ಪಾರಾಯಣ ಮಾಡುವುದು ಸಮಾಜಕ್ಕೆ ಅತ್ಯಂತ ಶ್ರೇಯಸ್ಕರವಾಗಿದೆ. ಈ ಯಜ್ಞದಲ್ಲಿ ಜಾತಿ ಮತ ಲಿಂಗ ವಯಸ್ಸು ಎಂಬ ಭೇದವಿಲ್ಲದೆ ಸಮಸ್ತರೂ ಪಾಲ್ಗೊಳ್ಳಬಹುದು.

ಭಗವಂತನ ನಾಮೋಚ್ಚಾರಣೆಯು ಪ್ರತಿಯೊಬ್ಬರಿಗೂ ಸಾಧ್ಯವಾಗಿದ್ದು, ಅತ್ಯಂತ ಶ್ರೇಷ್ಠಧರ್ಮವಾಗಿದ್ದರಿಂದ ಲೋಕ ಕಲ್ಯಾಣಾರ್ಥವಾಗಿ ಆಚರಿಸುವ ಈ ಯಜ್ಞದಲ್ಲಿ ತಾವುಗಳೆಲ್ಲ ಮನಃಪೂರ್ವಕವಾಗಿ ಭಾಗವಹಿಸಿ, ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಶತನಾಮಗಳ ಪಾರಾಯಣವನ್ನು ಮಾಡುವ ಮೂಲಕ ಕೃತಾರ್ಥರಾಗಬೇಕೆಂದು ಬಯಸುತ್ತೇವೆ.

**ಪಾರಾಯಣ ಪ್ರತಿ ಆದಿತ್ಯವಾರ 15-01-2017ರಂದು ಪ್ರಾರಂಭಗೊಂಡು 07-05-2017ರ ತನಕ ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು ಇಲ್ಲಿ ಸಾಯಂಕಾಲ 4-30ಕ್ಕೆ ನಡೆಯಲಿದೆ. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ಶಂಕರರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

**- ಯು. ಪ್ರಫುಲ್ಲಚಂದ್ರ ರಾವ್**, ಜಿಲ್ಲಾ ಸಂಚಾಲಕರು, ಉಡುಪಿ, ಮೊಬೈಲ್ : 9880896166

**ಸೂಚನೆ : ಈ ಯಜ್ಞದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಪಾರಾಯಣಕ್ಕೆ ಬೇಕಾಗುವ ಪುಸ್ತಕಗಳು ಹಾಗೂ ಸಿ.ಡಿಗಳು ರಾಜ್ಯಾದ್ಯಂತ ಪ್ರತಿಯೊಂದು ಜಿಲ್ಲಾ ಹಾಗೂ ತಾಲ್ಲೂಕು ಸಂಚಾಲಕರಲ್ಲಿ ದೊರೆಯುತ್ತವೆ.**

## ಶುಭ ವಿವಾಹ

ಅಮ್ಮುಂಜೆ ಶ್ರೀಮತಿ ಹೇಮಲತಾ ಮತ್ತು ಶ್ರೀ ನಾಗೇಶ್ ರಾವ್‌ರವರ ಸುಪುತ್ರಿ ಶ್ರುತಿ ಮತ್ತು ಕೊಪ್ಪ ಶ್ರೀಮತಿ ಜಯಶ್ರೀ ಮತ್ತು ಶ್ರೀ ಬಿ. ಕೃಷ್ಣರಾವ್‌ರವರ ಪುತ್ರ ಶಿವಕುಮಾರ್ ಇವರ ವಿವಾಹವು ಪುತ್ತೂರು ತೆಂಕಿಲದಲ್ಲಿರುವ ಸ್ವಾಮಿ ಕಲಾಮಂದಿರದಲ್ಲಿ ತಾ.14-12-2016ರಂದು ಜರಗಿತು.

★★★★ ★★★★

ಶ್ರೀಮತಿ ಪ್ರಭಾ ಮತ್ತು ಶ್ರೀ ಬೆಳ್ಳೆ ಅವಿನಾಶ್ ಮೋಹನ್ ರಾವ್ ಇವರ ಪುತ್ರ ಕಾರ್ತಿಕ್ ಹಾಗೂ ಶ್ರೀಮತಿ ಸೌಭಾಗ್ಯಲಕ್ಷ್ಮೀ ಮತ್ತು ಶ್ರೀ ನಂದಾವರ ಕೌಳಿಗೆ ಸುರೇಶ್ ರಾವ್‌ರವರ ಪುತ್ರಿ ಸ್ವಾತಿ ಇವರ ವಿವಾಹವು ತಾ.21-12-2016ರಂದು ಮಂಗಳೂರಿನ ಸಂಘನಿಕೇತನ ಹಾಲ್‌ನಲ್ಲಿ ಜರಗಿತು.

★★★★ ★★★★

ಸಂತೋಷನಗರ, ಕರಂಬಳ್ಳಿಯ ಶ್ರೀಮತಿ ಆಶಾ ಮತ್ತು ಯು. ಅರವಿಂದ ಕುಮಾರ್ ಇವರ ಪುತ್ರ ಅನುದೀಪ ಕುಮಾರ ಹಾಗೂ ಬಾರ್ಕೂರು ಶ್ರೀಮತಿ ಶೀಲಾ ಮತ್ತು ಶ್ರೀ ಶಾಂತಿನಾಥ ಇವರ ಸುಪುತ್ರಿ ಪಲ್ಲವಿ ಇವರ ವಿವಾಹವು ತಾ.21-12-2016ರಂದು ಶ್ರೀಶಾರದಾ ಕಲ್ಯಾಣ ಮಂಟಪ, ಕುಂಜಿಬೆಟ್ಟು ಉಡುಪಿ ಇಲ್ಲಿ ನೆರವೇರಿತು.

★★★★ ★★★★

ಮಿಯ್ಯಾರು ಶ್ರೀಮತಿ ಸುಶೀಲಾ ಮತ್ತು ಶ್ರೀ ಯು.ಗುರುರಾಜ ರಾವ್ ಇವರ ಪುತ್ರ ಸೂರ್ಯನಾರಾಯಣ ಹಾಗೂ ಬೆಳ್ಮಣ್ ದಿ| ದಿವಾಕರ್ ಮತ್ತು ಶ್ರೀಮತಿ ಕುಸುಮಾ ಡಿ.ರಾವ್ ಇವರ ಪುತ್ರಿ ಶ್ರುತಿ ಇವರ ವಿವಾಹವು ತಾ.22-12-2016ರಂದು ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನೆರವೇರಿತು.

★★★★ ★★★★

ಕಂಗುಳಿ ಶ್ರೀಮತಿ ಕ್ಷಮಾಗೌರಿ ಮತ್ತು ಶ್ರೀ ಹರಿನಾರಾಯಣ ರಾಯರ ಪುತ್ರಿ ಶ್ರೀರಕ್ಷಾ ಹಾಗೂ ಮಡಿಯಾಲ ಶ್ರೀಮತಿ ಗಾಯತ್ರಿ ಮತ್ತು ಶ್ರೀ ಬಾಲಕೃಷ್ಣರಾಯರ ಪುತ್ರ ಅರ್ಜುನ ಇವರ ವಿವಾಹವು ಮಂಗಳೂರಿನ ಸುಜಿರ್ ಸಿ.ವಿ.ನಾಯಕ್ ಹಾಲ್‌ನಲ್ಲಿ ತಾ.23-12-2016ರಂದು ನೆರವೇರಿತು.

★★★★ ★★★★

ಶ್ರೀಮತಿ ಗೀತಾ ಮತ್ತು ಶ್ರೀ ವಿಜಯಕುಮಾರ್ ರಾವ್ ಎಲ್ಲೂರು ಇವರ ಪುತ್ರಿ ಅಶ್ವಿನಿ ಹಾಗೂ ಬಂಟ್ವಾಳ ಶ್ರೀಮತಿ ಸತ್ಯಭಾಮಾ ಮತ್ತು ದಿ| ಶಂಕರನಾರಾಯಣ ಭಟ್ಟರ ಪುತ್ರ ಬಾಲಚಂದ್ರಕುಮಾರ ಇವರ ವಿವಾಹವು ತಾ.01-01-2017ರಂದು ಶ್ರೀಶಾರದಾ ಕಲ್ಯಾಣ ಮಂಟಪ, ಕುಂಜಿಬೆಟ್ಟು ಉಡುಪಿ ಇಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಮತ್ತು ಶ್ರೀ ಕಾಪು ಅಶೋಕ್ ಕುಮಾರ್ ಇವರ ಪುತ್ರ ಅಕ್ಷಯ್‌ಕುಮಾರ್ ಹಾಗೂ ಶ್ರೀಮತಿ ಮತ್ತು ಶ್ರೀ ದಿ| ಚಂದ್ರಶೇಖರ್‌ರವರ ಪುತ್ರಿ ಸವಿತ ಇವರ ವಿವಾಹವು ತಾ.02-01-2017ರಂದು ಹೊಟೇಲ್ ಕಿದಿಯೂರಿನ ಮಾಧವಕೃಷ್ಣಾ ಹಾಲ್‌ನಲ್ಲಿ ನೆರವೇರಿತು.

## ಬ್ರಹ್ಮೋಪನಯನ

ಶ್ರೀಮತಿ ಸಂಗೀತಾ ಮತ್ತು ಶ್ರೀ ಇನ್ನ ವಿಕಾಸ್ ರಾವ್‌ರವರ ಪುತ್ರ ಚಿ| ವಿಶ್ರುತ್‌ನ ಉಪನಯನ ಸಮಾರಂಭವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.23-12-2016ರಂದು ನೆರವೇರಿತು.

★★★★ ★★★★

ನೆಲ್ಲಿಕುಂಜ ಶ್ರೀಮತಿ ಸ್ಮಿತಾ ಹಾಗೂ ಶ್ರೀ ಕೃಷ್ಣರಾಜ್ ಇವರ ಸುಪುತ್ರ ಚಿ| ಸಾತ್ವಿಕನ ಉಪನಯನ ಸಮಾರಂಭವು ನೆಲ್ಲಿಕುಂಜೆಯ ಸ್ವಗ್ರಹದಲ್ಲಿ ತಾ.01-01-2017ರಂದು ನೆರವೇರಿತು.

★★★★ ★★★★

ಅನಂತಪುರ ಶ್ರೀ ಚೈತ್ರ ಕುಮಾರ ಹಾಗೂ ಶ್ರೀಮತಿ ಸಂಗೀತಾ ಇವರ ಸುಪುತ್ರ ಚಿ| ಅದ್ವೈತ್‌ನ ಉಪನಯನ ಸಮಾರಂಭವು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ತಾ.05-01-2017ರಂದು ನೆರವೇರಿತು.

## ನಿಧನ



ಉಡುಪಿ ಬಸ್ಸ್ಟ್ಯಾಂಡ್ ಬಳಿಯ ನಿವಾಸಿ ಬಿ.ನಾರಾಯಣ ರಾಯರು ತಾ.06-01-2017ರಂದು ರಾತ್ರಿ ಅಲ್ಪಕಾಲದ ಅಸ್ವಾಸ್ಥದಿಂದ 85ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

★★★★ ★★★★

ಮುಲ್ಕಿ ಚಿತ್ರಾಪು ನಿವಾಸಿ ಶ್ರೀಮತಿ ಪ್ರಭಾವತಿ ರಾವ್ ಇವರು ತಾ.06-12-2016ರಂದು ನಿಧನ ಹೊಂದಿದರು.


**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams





**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಸಮಾವೇಶದಲ್ಲಿ ಉಡುಪಿ ಸಂಘದ ಸಕ್ರಿಯ ಪಾತ್ರ






ತಾ.17–12–2016 ಹಾಗೂ 18–12–2016 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಉಡುಪಿ ಸಂಘದ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡರು. ತಾ.17–12–2017ರಂದು ನಡೆದ ಚಂಡಿಕಾ ಹೋಮದಲ್ಲಿ ಹಾಗೂ ತಾ.18ರಂದು ನಡೆದ ಶ್ರೀ ಶಂಕರಾಚಾರ್ಯ ಶತನಾಮ ಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ ಹಾಗೂ ರುದ್ರ ಪಠಣದಲ್ಲಿ ನಮ್ಮ ಸ್ವಾಧ್ಯಾಯ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು. ಶ್ರೀ ಜಿ.ಕೆ.ಕೋಲ್ಪೆ ಇವರು ಧಾರ್ಮಿಕ ಕಾರ್ಯಕ್ರಮಗಳಿಗೆ ಮುತುವರ್ಜಿಯಿಂದ ಸಹಕಾರ ನೀಡಿದರು ಅವರು ಶ್ರೀ ಶಂಕರಾಚಾರ್ಯ ಶತನಾಮವನ್ನು ಮುದ್ರಿಸಿ ಸಮಾಜ ಬಾಂಧವರಿಗೆ ಹಂಚಿದ್ದು ಹಾಗೂ ಬ್ರಾಹ್ಮಣತ್ವ ವನ್ನು ಉದ್ದೀಪನ ಗೊಳಿಸಿಕೊಳ್ಳಲು ಕಿವಿಮಾತು ಗಳನ್ನು ಕರಪತ್ರದ ಮುಖೇನ ಮುದ್ರಿಸಿ ಹಂಚಿದ್ದು ವಿಶೇಷವಾಗಿತ್ತು, ಸಂಘದ ಅಧ್ಯಕ್ಷ ರಾದ ಶ್ರೀ ವೈ. ಭುವನೇಂದ್ರರಾವ್, ಉಪಾಧ್ಯಕ್ಷ ಶ್ರೀ ಎಸ್.ಎಮ್.ರಾವ್, ಕೋಶಾಧಿಕಾರಿ ಶ್ರೀ ಕೆ. ಸುಧಾಕರ ರಾವ್ ಸಭಾ ಕಾರ್ಯಕ್ರಮಗಳಲ್ಲಿ ಹಾಜರಿದ್ದು ಸಹಕರಿಸಿದರು. ಶ್ರೀ ವೈ. ಭುವನೇಂದ್ರ ರಾಯರು ಸಂಘಗಳ ಗೋಷ್ಠಿಯಲ್ಲಿ ಉಡುಪಿ ಸಂಘದ ಪರವಾಗಿ ಸಂಘದ ಕಾರ್ಯಕ್ರಮಗಳ ಬಗ್ಗೆ ಹಾಗೂ ನಮ್ಮ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದರು. ಸಂಘದ ಉಪಾಧ್ಯಕ್ಷರಾದ ಡಾ। ವೈ.ಸುದರ್ಶನ್ ರಾವ್‌ರವರು "ನಮ್ಮ ಸಂಘಟನೆಗಳು ನಡೆಸಬೇಕಾದ ಸಮಾಜಮುಖೀ ಕಾರ್ಯಕ್ರಮಗಳು" ಎಂಬ ವಿಚಾರಗೋಷ್ಠಿಯನ್ನು ಅದರ ಅಧ್ಯಕ್ಷರಾಗಿ ನಿರ್ವಹಿಸಿದರು. ಉಡುಪಿಯಿಂದ ಶ್ರೀ ಮಹೇಶ್ ಹಾಗೂ ಮ.ನಾ.ಹೆಬ್ಬಾರ್‌ರನ್ನು ಸನ್ಮಾನಿಸಲಾಗಿತ್ತು. ತಾ.18.12.2016 ರಂದು ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಹಿಳಾವೇದಿಕೆಯ ಸದಸ್ಯರಿಂದ ವಿವಿಧ ಕಾರ್ಯಕ್ರಮಗಳು ಜರಗಿದವು. ಶ್ರೀಮತಿ ವಿದ್ಯಾರಾವ್ ಮತ್ತು ಕುಮಾರಿ ಮಾನಸರವರ ಸಂಗೀತ ಕಛೇರಿಯನ್ನು ಸಭಿಕರು ಆನಂದಿಸಿದರು. ಡಾ। ವೈ.ರವೀಂದ್ರನಾಥರವರು ಈ ಕಾರ್ಯಕ್ರಮಕ್ಕೆ ಹಾರ್ಮೋನಿಯಂನ ಸಾಥ್ ನೀಡಿದರು. ನಂತರ ನಡೆದ ಡಾ। ಚೈತ್ರಾ ರಾವ್ ಪೆರ್ಣಂಕಿಲ ಇವರ ಎರಡು ಭರತ ನಾಟ್ಯ ರೂಪಕಗಳ ಪ್ರದರ್ಶನ ಅಮೋಘವಾಗಿತ್ತು. ಕುಮಾರಿ ಮಾನಸ, ಕುಮಾರಿ ಪ್ರೇರಣಾ, ಕುಮಾರಿ ಶ್ರೀನಿಧಿ, ಕುಮಾರಿ ಶ್ರೀರಕ್ಷಾ, ಕುಮಾರಿ ಪಲ್ಲವಿ, ಕುಮಾರಿ ವೈಷ್ಣವಿಯವರಿಂದ ಸುಂದರವಾದ ನೃತ್ಯ ಪ್ರದರ್ಶನ ನಡೆಯಿತು. ಶ್ರೀಮತಿ ಪ್ರೀತಿ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀಮತಿ ಸಂಗೀತಾ ಮತ್ತು ಶ್ರೀಮತಿ ರಜನಿಯವರು ಸಹಕರಿಸಿದರು. ಎಲ್ಲಕ್ಕೂ ಮುಖ್ಯವಾಗಿ ಉಡುಪಿಯ ಸಮಾಜಬಾಂಧವರಿಂದ ಹಾಗೂ ಸಂಘದಿಂದ ಕಾಣಿಕೆಯಾಗಿ ಸುಮಾರು ಒಂದು ಲಕ್ಷದ ಮೊತ್ತವನ್ನು ಸಂಗ್ರಹಿಸಿ ದೇಣಿಗೆಯಾಗಿ ಸಮಾವೇಶಕ್ಕೆ ನೀಡಲಾಯಿತು.

## ಶ್ರೀ ಮ.ನಾ. ಹೆಬ್ಬಾರ ಹಾಗೂ ಶ್ರೀ ಮಹೇಶ್‌ರವರಿಗೆ ಸಮ್ಮಾನ



ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಆಶ್ರಯದಲ್ಲಿ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ನಿವೃತ್ತ ಉಪನ್ಯಾಸಕರೂ, ಪ್ರಸಿದ್ಧ ಹರಿದಾಸರೂ, ಯಕ್ಷಗಾನ ಕಲಾವಿದ ಹಾಗೂ ಲೇಖಕರೂ ಆಗಿರುವ ಶ್ರೀ ಮ.ನಾ.ಹೆಬ್ಬಾರ್ ಹಾಗೂ ಯುವ ರಂಗವಲ್ಲಿ ಕಲಾವಿದ ಮಹೇಶ್ ಇವರನ್ನು ಸಮ್ಮಾನಿಸಲಾಯಿತು. ಶ್ರೀ.ಜಿ.ಕೆ ಕೊಲ್ಪೆ, ಡಾ। ವೈ. ಸುದರ್ಶನ ರಾವ್, ಶ್ರೀ ಎಂ.ಆರ್.ವಾಸುದೇವ, ಶ್ರೀ ಎನ್.ಕೆ.ಜಗನ್ನಿವಾಸ್ ರಾವ್, ಮತ್ತು ಬೊಕ್ಕಸ ಚಂದ್ರಶೇಖರ ರಾವ್ ಇವರುಗಳು ವೇದಿಕೆಯಲ್ಲಿದ್ದರು.

## ಅಭಿನಂದನೆಗಳು



**ಶ್ರೀ ಸದಾಶಿವ ಎಮ್.ರಾವ್ ಹಾಗೂ ಶ್ರೀಮತಿ ವಸಂತಿ ರಾವ್**

ತಾ.06-01-2017ನೇ ಶುಕ್ರವಾರದಂದು ''ಸಹಸ್ರ ಚಂದ್ರದರ್ಶನ ಶಾಂತಿ'' ಇತ್ಯಾದಿ ಶಾಸ್ತ್ರೋಕ್ತ ಪೂಜೆಗಳನ್ನು ಸಂಪನ್ನಗೊಳಿಸಿರುವ ನಮ್ಮ ತೀರ್ಥರೂಪರಾದ ಶ್ರೀ ಸದಾಶಿವ ಎಮ್.ರಾವ್ ಹಾಗೂ ಮಾತೃಶ್ರೀ ಶ್ರೀಮತಿ ವಸಂತಿ ರಾವ್ ಇವರಿಂದ ಆಶೀರ್ವಾದ ಬಯಸುವ

ಡಾ। ಅಮಿತಾ ಶೋಭಾ ರಾವ್ ಮತ್ತು ಶ್ರೀ ಕೆ. ಚಂದ್ರಶೇಖರ ರಾವ್
ಡಾ। ಅಶುತೋಷ್ ರಾವ್ ಮತ್ತು ಶ್ರೀಮತಿ ಶೀತಲ್ ರಾವ್
ಚಿ। ಆಕಾಶ್ ರಾವ್, ಡಾ। ತನ್ವಿರಾವ್, ಡಾ। ಅನುಷಾ ರಾವ್, ಕು। ನಿವೇದಾ ರಾವ್ (ಮೊಮ್ಮಕ್ಕಳು)
ಹಾಗೂ ತಂತ್ರಾಡಿ ಸಾಭಿ ಮನೆ ಕುಟುಂಬಸ್ಥರು

## ಶುಭ ಹಾರೈಕೆಗಳು




**ಚಿ। ಅನುದೀಪ ಕುಮಾರ ಹಾಗೂ ಚಿ। ಸೌ। ಪಲ್ಲವಿ**

ನೂತನ ವಧೂವರರಿಗೆ ಶುಭ ಹಾರೈಸುವ,

ಶ್ರೀಮತಿ ಆಶಾ ಮತ್ತು ಶ್ರೀ ಯು. ಅರವಿಂದ ಕುಮಾರ, ಉಡುಪಿ
ಕುಮಾರಿ ಅನುಶ್ರೀ, ಉಡುಪಿ
ಶ್ರೀಮತಿ ಶೀಲಾ ಮತ್ತು ಶ್ರೀ ಶಾಂತಿನಾಥ, ಬೈಲೂರು, ಕಾರ್ಕಳ
ಶ್ರೀಮತಿ ಯು. ಶ್ಯಾಮಲಾದೇವಿ ಮತ್ತು ಮಕ್ಕಳು, ಕಾಪು
ಶ್ರೀಮತಿ ಮತ್ತು ಶ್ರೀ ಟಿ. ದೇವರಾಜ ಶ್ಯಾನುಭಾಗ, ಬೆಂಗಳೂರು
ಶ್ರೀ ಎಂ. ಸದಾನಂದ ರಾವ್ ಮತ್ತು ಮಕ್ಕಳು, ಚಿಟ್ಪಾಡಿ, ಉಡುಪಿ

# ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಶೃಂಗೇರಿ ಜಗದ್ಗುರುಗಳಿಗೆ ಅಭಿವಂದನೆ



ಕುಂದಾಪುರ: ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ಬ್ರಾಹ್ಮಣರದ್ದು ಅಗ್ರಸ್ಥಾನ. ಸಮಾಜವನ್ನು ಮುನ್ನಡೆಸುವ ಜವಾಬ್ದಾರಿ ಬ್ರಾಹ್ಮಣರಿಗಿದೆ. ಅದನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. 'ಗೌರವ ಬೇಕು; ಜವಾಬ್ದಾರಿ ಬೇಡ' ಎನ್ನದೆ, ಸಮಾಜಕ್ಕೆ ಜ್ಞಾನ –ಮೊದಲಾದ ಜೀವನವಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ನಿತ್ಯಕರ್ಮಾನುಷ್ಠಾನ–ಗಳನ್ನು ಬಿಡದೆ ಗುರುತರವಾದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು–ಎಂದು ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಕರೆನೀಡಿದರು.

ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ.,) ದ ಮೊದಲ ಕಾರ್ಯಕ್ರಮವಾದ 'ಜಗದ್ಗುರು ವಂದನೆ'ಯಲ್ಲಿ ಅವರು ಮಾತನಾಡುತ್ತಿದ್ದರು. ಅವರ ಕರಕಮಲಸಂಜಾತರಾದ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ಉಪಸ್ಥಿತರಿದ್ದರು. ಕುಂದಾಪುರದ ಹೊರವಲಯದ ಹಂಗಳೂರಿನ ಶ್ರೀ ಅನಂತಪದ್ಮನಾಭ ಸಭಾಭವನದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ಮಂಜುನಾಥ ಉಪಾಧ್ಯರು ಸ್ವಾಗತಿಸಿದರು.

ಗೌರವಾಧ್ಯಕ್ಷ ಡಾ। ಎಚ್.ವಿ. ನರಸಿಂಹಮೂರ್ತಿಯವರು ಪ್ರಾಸ್ತವಿಕ ಮಾತುಗಳೊಂದಿಗೆ ಕಾರ್ಯಕ್ರಮ ನಿರ್ವಹಿಸಿದರು. ಡಾ।ಪಿ.ವಿಜಯ ಮಂಜರು ವಾಚಿಸಿದ ಅಭಿವಂದನ ಪತ್ರವನ್ನು ಜಿಲ್ಲಾ ಉಪಾಧ್ಯಕ್ಷ ಶ್ರೀ ಕೃಷ್ಣಾನಂದ ಚಾತ್ರರು ಉಭಯ ಜಗದ್ಗುರುಗಳಿಗೆ ಸಮರ್ಪಿಸಿದರು.

ಇದೇ ಸಂದರ್ಭದಲ್ಲಿ ಶೃಂಗೇರಿ ಶ್ರೀ ಶಾರದಾಪೀಠದ ಪ್ರಾಂತೀಯ ಧರ್ಮಾಧಿಕಾರಿ ಡಾ। ಎಚ್.ವಿ.ನರಸಿಂಹಮೂರ್ತಿಯವರ ಎಪ್ಪತ್ತೈದನೆಯ ಕೃತಿಯಾದ 'ಧಾರ್ಮಿಕ ಸುಭಾಷಿತಗಳು' ಎಂಬ ಗ್ರಂಥವನ್ನು ಜಗದ್ಗುರುಗಳು ಅನಾವರಣಗೊಳಿಸಿದರು. ಜಿಲ್ಲಾ ಮಹಾಸಭಾದ ಎಲ್ಲಾ ಕಲಾಪಗಳಲ್ಲಿ ಸಕ್ರಿಯವಾಗಿ ಸಹಕರಿಸಿದ ಒಂಭತ್ತು ಮಂದಿ ವಿಪ್ರೋತ್ತಮರನ್ನು ಗುರುತಿಸಿ ಗೌರವಿಸಲಾಯಿತು. ಕುಂದಾಪುರ ತಾಲೂಕು ಬ್ರಾಹ್ಮಣ ಪರಿಷತ್ತಿನ ವಿಜ್ಞಾಪನ ಪತ್ರವನ್ನು ಬಿಡುಗಡೆ ಮಾಡಲಾಯಿತು. ಸಭಾದ ಪದಾಧಿಕಾರಿಗಳು ಜಗದ್ಗುರುಗಳಿಗೆ ಫಲ–ಪುಷ್ಪ, ವಸ್ತ್ರ, ಕಾಣಿಕೆಗಳನ್ನು ಸಮರ್ಪಿಸಿ, ಆಶೀರ್ವಚನ ಪಡೆದರು.

ಹಾಲಾಡಿ ಪಂಚಾಂಗಕರ್ತರಾದ ಶ್ರೀ ವಾಸುದೇವ ಜೋಯ್ಸರು ಅಭಿನಂದನ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಗಣೇಶ ರಾವ್ ಕುಂಭಾಸಿ ವಂದಿಸಿದರು.

## ಚಿಣ್ಣರ ಅಂಗಳ



**ವೈಷ್ಣವಿ ಶರ್ಮ,** ಶ್ರೀನಿವಾಸ ಶರ್ಮರವರ ಪುತ್ರಿ, 2ನೇ ತರಗತಿ, ಸಾಗರ ವಿದ್ಯಾಮಂದಿರ, ಪಾದೆಬೆಟ್ಟು


# ಶ್ರೀ ಸುಬ್ರಹ್ಮಣ್ಯ ಸಭಾ ಮಹಾಸಭೆ



ಚಿತ್ರ : ಶ್ರೀ ರಘುವೀರ, ಪೆರ್ಡೂರು ವರದಿ : ಪಿ. ಶ್ರೀಕಾಂತ ರಾವ್

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 107ನೇ ವರ್ಷದ ಮಹಾಸಭೆ ತಾ.25–12–2016 ರಂದು ಮಧ್ಯಾಹ್ನ 3 ಗಂಟೆಗೆ ನಡೆಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವ ಸದಸ್ಯರನ್ನು ಸ್ವಾಗತಿಸಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2015–16ನೇ ವರ್ಷದ ಆಡಳಿತ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಪರಿಶೋಧಿತ ಲೆಕ್ಕಪತ್ರ ಮತ್ತು ವರದಿಗಳನ್ನು ವಾಚಿಸಿದರು. ವರದಿಗಳಿಗೆ ಸಭೆಯ ಸದಸ್ಯರು ಸರ್ವಾನುಮತದಿಂದ ಮಂಜೂರು ನೀಡಿದರು. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳನ್ನು ಚರ್ಚಿಸಲಾಯಿತು. ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಧನ್ಯವಾದ ನೀಡಿದರು. ಆಡಳಿತ ಮಂಡಳಿಯ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಡಾ। ಅವನೀಂದ್ರನಾಥ್‌ರವರ ಪುಸ್ತಕ ಬಿಡುಗಡೆ




ನಮ್ಮ ಸಮಾಜದ ಉದಯೋನ್ಮುಖ ಲೇಖಕ ಡಾ। ಅವನೀಂದ್ರನಾಥ ರಾವ್‌ರವರ "ದೆಹಲಿಯ ಕನ್ನಡ ಜಗತ್ತಿನಲ್ಲಿ" ಎಂಬ ಪುಸ್ತಕವು ದೆಹಲಿಯ ಕನ್ನಡ ಸಂಘದ ವತಿಯಿಂದ ತಾ.01–01–2017ರಂದು ದೆಹಲಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ। ಟಿ.ಎಸ್.ಸತ್ಯನಾಥ್‌ರವರಿಂದ ಬಿಡುಗಡೆಗೊಂಡಿತು. ಈ ಪುಸ್ತಕದಲ್ಲಿ ವ್ಯಕ್ತಿಚಿತ್ರ ಬರಹ, ಕೃತಿ ವಿಮರ್ಶೆ ಹಾಗೂ ರಂಗ ವಿಮರ್ಶೆಗಳು ಸೇರಿ ಒಟ್ಟು 34 ಬರಹಗಳಿವೆ.

*With Best Compliments from :*



***Dr. Sanath S. Rao***
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org